MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ: 286 | ಶನಿವಾರ : 30-08-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 286 | SATURDAY : 30-08-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಭ್ರಷ್ಟಾಚಾರ ತೊಲಗಿದಲ್ಲಿ ಭಾರತ ನಂ.1 ದೇಶವಾಗಲಿದೆ: ಉಪ ಲೋಕಾಯುಕ್ತ ಬಿ.ವೀರಪ್ಪ



ಯುವ ಮಾರ್ಗ ಸುದ್ದಿ

**ರಾಯಚೂರ,ಆ.29–**ಭ್ರಷ್ಟಾಚಾರದ ಪಿಡುಗನ್ನು ನಾವೆಲ್ಲ ಸಂಕಲ್ಪ ಮಾಡಿ ತೆಗೆದು ಹಾಕಿದಲ್ಲಿ ಭಾರತ ನಂಬರ್ 1 ದೇಶವಾಗಿ ಹೊರ ಹೊಮ್ಮಲಿದೆ ಎಂದು ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ ವೀರಪ್ಪ ಅವರು ಹೇಳಿದರು.

ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದ ಜಗಜ್ಯೋ ತಿ ಬಸವೇಶ್ವರ ಸಭಾಂಗಣದಲ್ಲಿ ಆಗಸ್ಟ್ 29 ರಂದು ನಡೆದ ಸಾರ್ವಜನಿಕರ ಅಹವಾಲು ಸ್ವೀಕರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಾರಕ ಕ್ಯಾನ್ಸರ್ ಖಾಯಿಲೆಯನ್ನು ಗುಣಪಡಿಸಬಹುದು; ಆದರೆ ಭ್ರಷ್ಟಾಚಾರ ತೊಲಗಿಸಲು ಆಗದು ಎನ್ನುವ ಹಾಗೆ ಎಲ್ಲೆಡೆ ಭ್ರಷ್ಟಾಚಾರವು ಬಹುದೊಡ್ಡ ಪಿಡುಗಾಗಿ ಪರಿಣಮಿಸುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

**ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಭ್ರಷ್ಟರಲ್ಲ;** ಕೆಲವರು ಮಾತ್ರ ಹಾದಿ ತಪ್ಪಿದ್ದಾರೆ. 450 ಹಾಜರಿ ಹಾಕಿ, 150 ವಿದ್ಯಾರ್ಥಿಗಳಿಗಷ್ಟೇ ಊಟ ನೀಡಿ, ಬಾಕಿ ಹಾಜರಾತಿಯ ಹಣ ತಿನ್ನುವಂತಹ ಭ್ರಷ್ಟ ವಾರ್ಡನ್, ಅಧಿಕಾರಿಗಳು ನಮ್ಮ ಮಧ್ಯೆ ಇದ್ದಾರೆ. ವಿದ್ಯಾರ್ಥಿಗಳ ಊಟದ ಹಣ ತಿನ್ನುವುದು ಅನ್ನದ ಮೇಲೆ ಮಾಡುವ ಮೋಸವಾಗಿದೆ. ಅನ್ಯರ ಅನ್ನದ ಹಣ ತಿನ್ನುವುದು ದೇಶಕ್ಕೆ ದ್ರೋಹ ಮಾಡಿದಂತೆ ಎಂದು ಉಪ ಲೋಕಾಯುಕ್ತರು ಎಚ್ಚರಿಕೆ ನೀಡಿದರು.

ಅಧಿಕಾರಿಗಳು, ಭ್ರಷ್ಟದ ಹಣವನ್ನು ಮನೆಗೆ ಒಯ್ದರೆಅವರ ಹೆಂಡತಿ ಮತ್ತು ಮಕ್ಕಳು "ನಾವು ಲಂಚದ ಊಟ ಮಾಡುವುದಿಲ್ಲ" ಎಂದು ಹೇಳುವ ಕಾಲ ಬರಬೇಕಿದೆ. ನಾವು ತಿನ್ನುವ ಅಣ್ಣ ಬೇರೆಯವರದಾದರೆ ಅದು ವಿಷ ಎಂದು ಅರ್ಥೈಸಿಕೊಂಡು ಜೀವನ ನಡೆಸಿದಾಗ ಈ ಸಮಾಜದ ಬದಲಾವಣೆ ಸಾಧ್ಯವಿದೆ ಎಂದು ತಿಳಿಸಿದರು.

ಹಣ ಪಡೆದು ಓಟು ಹಾಕುವ ಕಾಲ ಬಂದಿದೆ. ಇದರ ಅರ್ಥ ಏನು. ಸಾರ್ವಜನಿಕರ ಮೇಲೆ ಭ್ರಷ್ಟಾಚಾರದ ಆರೋಪ ಬರಬಾರದು. ಶಿಕ್ಷಣದ ಜೊತೆಗೆ ನಮಗೆ ಸಂಸ್ಕಾರ, ಮಾನವೀಯತೆಯ ಗುಣಗಳು ಇರಬೇಕು ಎಂದು ಉಪ ಲೋಕಾಯುಕ್ತರು ಸಲಹೆ ಮಾಡಿದರು.ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಸುಭಾಷಚಂದ್ರ ಬೋಸ್, ವಲ್ಲಭಬಾಯಿ ಪಟೇಲ್ ಸೇರಿದಂತೆ **(2ನೇಪುಟಕ್ಕೆ)**

## ಸಚಿವ ಬೋಸರಾಜು ರಾಜೀನಾಮೆಗೆ ಕರ್ನಾಟಕ ರೈತ ಸಂಘ ಆಗ್ರಹ



ಯುವ ಮಾರ್ಗ ಸುದ್ದಿ

**ಮಾನ್ವಿ,ಆ.29–**ರಾಜ್ಯ ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರು ಕರ್ನಾಟಕ ರೈತ ಸಂಘದ ಪದಾಧಿಕಾರಿಗಳೊಂದಿಗೆ ಅನುಚಿತವಾಗಿ ವರ್ತಿಸಿದ್ದು, ಕೂಡಲೇ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಸಂಘದ ಜಿಲ್ಲಾಧ್ಯಕ್ಷ ಅಶೋಕ ನೀಲಗಲ್ ಒತ್ತಾಯಿಸಿದ್ದಾರೆ.

ಶುಕ್ರವಾರ ಪತ್ರಿಕಾ ಭವನದಲ್ಲಿ ಸುದಿ್ದಗೋಷ್ಠಿ ನಡೆಸಿ ಅವರು ಈ ವಿಷಯ ತಿಳಿಸಿದರು.ಆಗಸ್ಟ್ 25ರಂದು ಸಿರವಾರ ಪಟ್ಟಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಸಚಿವ ಎನ್.ಎಸ್. ಬೋಸರಾಜು ಆಗಮಿಸಿದ್ದರು. ಈ ಸಂದರ್ಭದಲ್ಲಿ ಕರ್ನಾಟಕ ರೈತ ಸಂಘದ ಸಿರವಾರ ತಾಲೂಕು ಕಾರ್ಯದರ್ಶಿ ಹುಲಿಗಪ್ಪ ಮತ್ತು ಜಿಲ್ಲಾ ಸಮಿತಿ ಸದಸ್ಯ ಹನುಮಂತಪ್ಪ ಕುಂಬಾರ ಸೇರಿದಂತೆ ಇತರ ಪದಾಧಿಕಾರಿಗಳು ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಸಿರವಾರ ಪಟ್ಟಣದ ರಾಜ್ಯ ಹೆದ್ದಾರಿ–61ರಲ್ಲಿ ಬಸವೇಶ್ವರ ವೃತ್ತದಿಂದ ನಾಗಡದಿನ್ನಿ ವೃತ್ತದವರೆಗೆ ರಸ್ತೆಯನ್ನು ವಿಸ್ತರಿಸಲು 2.85 ಕೋಟಿ ವೆಚ್ಚದ ಕಾಮಗಾರಿ ನಡೆಯುತ್ತಿತ್ತು. ಈ ಕಾಮಗಾರಿಯು ನಿಯಮಾನುಸಾರವಾಗಿ ರಸ್ತೆಯ ಮಧ್ಯಭಾಗದಿಂದ ಎರಡೂ ಕಡೆ 15 ಮೀಟರ್ ಅಗಲೀಕರಣಗೊಳ್ಳಬೇಕಿತ್ತು. ಆದರೆ, ಗುತ್ತಿಗೆದಾರ ಗೋವಿಂದರಾಜು ಕೇವಲ 35 ಅಡಿಗಳಷ್ಟು ರಸ್ತೆ ಅಗಲೀಕರಣ ಮಾಡಲು ಮುಂದಾಗಿದ್ದಾರೆ ಎಂದು ರೈತ ಸಂಘದ ಪದಾಧಿಕಾರಿಗಳು ಸಚಿವರ ಗಮನಕ್ಕೆ ತಂದರು.ಸಮಸ್ಯೆಯನ್ನು ತಿಳಿಸಿದಾಗ, ಸಚಿವ ಬೋಸರಾಜು ಅವರು ರೈತ ಸಂಘದ ಪದಾಧಿಕಾರಿಗಳೊಂದಿಗೆ ಸಾರ್ವಜನಿಕವಾಗಿ ಅನುಚಿತವಾಗಿ ವರ್ತಿಸಿದರು ಎಂದು ಅಶೋಕ ನೀಲಗಲ್ ಆರೋಪಿಸಿದರು. "ಸಚಿವರ ಈ ವರ್ತನೆ ಸರಿಯಲ್ಲ. ಜನಪ್ರತಿನಿಧಿ ಕಾಯ್ದೆ ಅನ್ವಯ ಅವರು ತಕ್ಷಣವೇ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು,**(2ನೇಪುಟಕ್ಕೆ)**

## ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಆರ್ಥಿಕ ದಿವಾಳಿ :ಕೆ.ವಿರೂಪಾಕ್ಷಪ್ಪ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಆ.29–**ಮುಂದಾಲೋಚನೆ ಇಲ್ಲದೇ ಗ್ಯಾರಂಟಿ ಯೋಜನೆಗಳನ್ನು ಹಾರಿಗೆ ತಂದು ರಾಜ್ಯದ ಅಭಿವೃದ್ಧಿಯನ್ನು ಕಡೆಗಣಿಸುತ್ತಿರುವುದಲ್ಲದೇ, ರಾಜ್ಯದಲ್ಲಿ ಆರ್ಥಿಕ ದಿವಾಳಿತನಕ್ಕೆ ಕಾಂಗ್ರೆಸ್ ಕಾರಣವಾಗಿದೆ ಎಂದು ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಆರೋಪಿಸಿದರು.

ಪಟ್ಟಣದ ವಿಜಯಮಹಾಂತೇಶ್ವರ ಶಾಖಾಮಠದಲ್ಲಿ ಗುರುವಾರ ಸಂಜೆ ಆಯೋಜಿಸಿದ್ದ ಬಿಜೆಪಿ ಮಂಡಲ ಅಧ್ಯಕ್ಷರುಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಭ್ರಷ್ಟಾಚಾರ, ಹಗರಣಗಳಲ್ಲಿ ಮುಳುಗಿದೋಗಿದೆ. ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಧರ್ಮಸ್ಥಳದ ಬುರುಡೆ ಪ್ರಕರಣದತ್ತ ಜನರ ಚಿತ್ತ ಹರಿಸುವಂತೆ ಮಾಡುತ್ತಿದೆ. ರಾಜ್ಯದ ಪ್ರತಿ ಕ್ಷೇತ್ರದ ಅಭಿವೃದ್ಧಿಗೆ 50 ಕೋಟಿ ರೂಪಾಯಿಗಳನ್ನು ನೀಡುವುದಾಗಿ ಹೇಳಿದ್ದಷ್ಟೇ ಸರಿ. ಯಾವ ಶಾಸಕರಿಗೂ ನಯಾ ಪೈಸೆ ಅಭಿವೃದ್ಧಿಗೆ ನೀಡದಿರುವುದು ಸರಕಾರದ ವಿವಾಳಿತನಕ್ಕೆ ಸಾಕ್ಷಿಯಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಮರಿಚೀಕೆಯಾಗಿ ಜನರು ಕಾಂಗ್ರೆಸ್ ಸರಕಾರದ ವೈಫಲ್ಯಕ್ಕೆ ರೋಸಿ ಹೋಗಿದ್ದಾರೆ. ಎಂದರು.

ಕೇವಲ ಅಧಿಕಾರಕ್ಕೆ ಬರಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ರಾಜ್ಯದ ಜನರಿಗೆ ಹುಸಿ ಭರವಸೆ ನೀಡುವ ಮೂಲಕ ಕಾಂಗ್ರೆಸ್ ಜನರಿಗೆ ಅನ್ಯಾಯ ಮಾಡಿದೆ. ಗುತ್ತೇದಾರಿಕೆಯಲ್ಲಿ ಶೇ.60 ಪರ್ಸಂಟೇಜ್ ಪಡೆಯುವ ಮೂಲಕ ಇವರು ಎಲ್ಲಾ ದಾಖಲೆಗಳನ್ನೂ ಮುರಿದಿದ್ದಾರೆ. ಕಾಂಗ್ರೆಸ್ ಆಡಳಿತಕ್ಕೆ ಜನ ಬೇಸತ್ತದ್ದಾರೆ. ನೂತನವಾಗಿ ಆಯ್ಕೆಯಾಗಿರುವ ಮಂಡಲ ಅಧ್ಯಕ್ಷರುಗಳು ಕೇಂದ್ರ ಸರಕಾರದ ಜನಪರ ಅಭಿವೃದ್ಧಿ ಕಾರ್ಯಗಳು ಮತ್ತು ರಾಜ್ಯ**(2ನೇಪುಟಕ್ಕೆ)**

## ಘನತ್ಯಾಜ್ಯ ವಿಲೆಗೆ ವಿಳಂಬ: ಪಾಲಿಕೆಯ ಪರಿಸರ ಅಭಿಯಂತರರ ಮೇಲೆ ಸುಮೋಟೋ ಕೇಸ್

ಯುವ ಮಾರ್ಗ ಸುದ್ದಿ

**ರಾಯಚೂರು,ಆ.29–** ಉಪ ಲೋಕಾಯುಕ್ತರಾದ ಬಿ ವೀರಪ್ಪ ಅವರು ಎರಡನೇ ದಿನವಾದ ಆಗಸ್ಟ್ 29ರಂದು ಬೆಳಗ್ಗೆಯಿಂದಲೇ ಅನಿರೀಕ್ಷಿತ ಭೇಟಿ ಮುಂದುವರೆಸಿದರು.

ಮೊದಲಿಗೆ ಹೈದ್ರಾಬಾದ್ ರಸ್ತೆಯಲ್ಲಿನ ನೀರು ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿದರು. ಅಲ್ಲಿಂದ ನೇರವಾಗಿ ಯಕ್ಲಾಸಪುರ ಗ್ರಾಮದ ಬಳಿಯಲ್ಲಿನ ಘನ ತ್ಯಾಜ್ಯ ಸಂಪನ್ಮೂಲ ಪುನರ್ಬಳಕೆ ನಿರ್ವಹಣಾ ಘಟಕಕ್ಕೆ ತೆರಳಿ ಪರಿಶೀಲಿಸಿದರು.

ಈ ಘಟಕದಲ್ಲಿ ಘನ ತ್ಯಾಜ್ಯ ಹೀಗೇಕೆ ಬಿದ್ದಿದೆ. ಕಸ ಹೀಗೆ ಗುಡ್ಡೆಯಾಗಿ ಬಿದ್ದು ಎಷ್ಟು ವರ್ಷಗಳಾಗಿವೆ. ಇದನ್ನು ವಿಲೇ ಮಾಡಲು ತೊಂದರೆ ಏನು? ಎಂದು



ಇದೆ ವೇಳೆ ಉಪ ಲೋಕಾಯುಕ್ತರು, ರಾಯಚೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಮತ್ತು ಪರಿಸರ ಅಭಿಯಂತರರಿಗೆ ಪ್ರಶ್ನಿಸಿದರು.

ಈ ಘನ ತ್ಯಾಜ್ಯ ವಿಲೇಗೆ ಅನುದಾನ ಬಂದಿದೆ. ಟೆಂಡರ್ ಪ್ರಕ್ರಿಯೆ ನಡೆದಿದೆ ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದರು.

ರಾಶಿರಾಶಿಯಾಗಿ ಕಸ ಬಿದ್ದು, ಅದರ ಮೇಲೆ ಗಿಡಗಳು ಬೆಳೆದರು ಇದರ ವಿಲೆಗೆ ವಿಳಂಬ ಮಾಡಿದ್ದು ಅಕ್ಷಮ್ಯ ಎಂದು ಉಪ ಲೋಕಾಯುಕ್ತರು ಆಕ್ರೋಶ ವ್ಯಕ್ತಪಡಿಸಿ ಸುಮೋಟೋ ಕೇಸ್ ದಾಖಲಿಸಿದರು.

## ಭ್ರಷ್ಟ ಅಧಿಕಾರಿಗಳನ್ನು ನಾನು ಬಿಡುವುದಿಲ್ಲ: ಜಸ್ಟೀಸ್ ಬಿ.ವೀರಪ್ಪ ಆಕ್ರೋಶ



ಯುವ ಮಾರ್ಗ ಸುದ್ದಿ

**ರಾಯಚೂರು,ಆ.29–**ಈಗಾಗಲೇ ನಾನು ನನ್ನ ಆಸ್ತಿಯನ್ನು ಡಿಕ್ಲೇರ್ ಮಾಡಿದ್ದೇನೆ. ನಾನು ಬಂದಿರೋದೇ ಧರ್ಮ, ನ್ಯಾಯ ಸಂಸ್ಥಾಪನೆ ಮಾಡೋಕೆ. ಭ್ರಷ್ಠ ಅಧಿಕಾರಿಗಳ್ನು ಬಿಡುವುದಿಲ್ಲ ಎಂದು ಕರ್ನಾಟಕ ರಾಜ್ಯ ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ ವೀರಪ್ಪ ಅವರು ಆಕ್ರೋಶ ವ್ಯಕ್ತಪಡಿಸಿದರು.

ರಾಯಚೂರ ಜಿಲ್ಲಾ ಪ್ರವಾಸದಲ್ಲಿರುವ ಅವರು ಆಗಸ್ಟ್ 29ರಂದು ಬೆಳಗ್ಗೆ ಅನಿರೀಕ್ಷಿತ ಭೇಟಿ ನಂತರ ಕೃಷಿ ವಿವಿಯ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಅಹವಾಲು ಆಲಿಸಿ ಅವರು ಮಾತನಾಡಿದರು.

ನಾನು ಆಗಸ್ಟ್ 28ರಂದು ಇಡೀ ದಿನ ರಾಯಚೂರು ಸುತ್ತಿದ್ದೇನೆ. 15ಕ್ಕು ಹೆಚ್ಚು ಕಚೇರಿಗಳಿಗೆ ಭೇಟಿ ನೀಡಿದ್ದೇನೆ. ಮಳೆಯಲ್ಲು ಹಾಸ್ಟೇಲ್ ಭೇಟಿ ಮಾಡಿದ್ದೇನೆ. ಲೋಪ ಕಂಡು ಬಂದಲ್ಲಿ ಸ್ಥಳದಲ್ಲೇ 14 ಸ್ವಯಂ ಪ್ರೇರಿತ ದೂರು ದಾಖಲಿಸಿ ಎಚ್ಚರಿಕೆ ನೀಡಿದ್ದೇನೆ. ಹಾಸ್ಟೆಲಗಳಿಗೆ ಹೋದಾಗ ಮಕ್ಕಳ ಊಟದ ಹಣ ಕದಿಯುತ್ತಿದ್ದ ವಾರ್ಡನಗೆ ಅಮಾನತು ಶಿಕ್ಷೆಗೆ ಗುರಿಪಡಿಸಿದ್ದೇನೆ ಎಂದು ಉಪ ಲೋಕಾಯುಕ್ತರು ಹೇಳುತ್ತಿದ್ದಂತೆ, ಸಭಾಂಗಣದಲ್ಲಿ ಸೇರಿದ್ದ ಜನರಿಂದ ಕರತಾಡನ ಕೇಳಿ ಬಂದಿತು.

ಸಂವಿಧಾನ ರಚನೆ ಮಾಡಿದಂತಹ ಡಾ.ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನ ಜಾರಿಯಾದ ಮೇಲೆ ಭಾರತದ ಜನಗಳಾದ ನಮ್ಮಿಂದ ನೊಂದ ಜನರಿಗೆ ಸರಿಯಾಗಿ ನ್ಯಾಯ ಕೊಡಲಾಗುತ್ತಿಲ್ಲ ಎನ್ನುವ ನೋವು ನನಗೆ ಕಾಡುತ್ತಿದೆ ಎಂದು ಇದೆ ವೇಳೆ ಉಪ ಲೋಕಾಯುಕ್ತರು ಭಾವುಕರಾದರು.

ಅಧಿಕಾರಿಗಳು ಮತ್ತು ಸಿಬ್ಬಂದಿ ಒಳ್ಳೆಯವರಿದ್ದರೆ ನಾನು ಅವರ ಪಾದಮುಟ್ಟಿ ಕಾಲು ಮುಗಿಯುತ್ತೇನೆ. ಭ್ರಷ್ಟರಿದ್ದರೆ ಕತ್ತು ಹಿಡಿದು ಕಾನೂನು ಬದ್ಧವಾಗಿ ಏನು ಮಾಡಬೇಕು ಅದು ಮಾಡುತ್ತೇನೆ ಎಂದು ಅವರು ಎಚ್ಚರಿಕೆ ನೀಡಿದರು.

ನಾನು ಬಂದಿರೋದೇ ಈ ಭ್ರಷ್ಟಾಚಾರದ ಪಿಡುಗನ್ನು ತೊಲಗಿಸೋಕೆ. ಈ ಜನರ ಋಣ ತೀರಿಸುವುದೇ ನನ್ನ ಧ್ಯೇಯ ಎಂದು ಭಾವಿಸಿದ್ದೇನೆ. ತಪ್ಪು ಕಂಡು ಬಂದರೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳುತ್ತೇನೆ ಎಂದರು.

ಈಗ ಶಾಸಕಾಂಗ ಬಲಹೀನವಾಗಿದೆ ಎಂದು ಅಭಿಪ್ರಾಯಪಟ್ಟ ಉಪ ಲೋಕಾಯುಕ್ತರು, ಕಾರ್ಯಾಂಗದ ವೈಖರಿ ಮೇಲೆ ಸಂಶಯ ಮೂಡಿದೆ. ನ್ಯಾಯಾಂಗದ ಮೇಲೆ ಮಾತ್ರ **(2ನೇಪುಟಕ್ಕೆ)**

### ರಾಷ್ಟ್ರೀಯ ಕ್ರೀಡಾ ದಿನಾಚರಣೆ

## ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೇಜರ್ ಧ್ಯಾನಚಂದ್ ಜಯಂತ್ಯೋತ್ಸವ

ಯುವ ಮಾರ್ಗ ಸುದ್ದಿ



**ಮಾನ್ವಿ,ಆ.29–** ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ರಾಷ್ಟ್ರೀಯ ಕ್ರೀಡಾ ದಿನ ಹಾಗೂ ಮೇಜರ್ ಧ್ಯಾನಚಂದ್ ಅವರ 120ನೇ ಜಯಂತ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಭಾರಿ ಪ್ರಾಂಶುಪಾಲರಾದ ಪ್ರೊ. ಸೈಯದ್ ಮಿನ್ಹಾಜ್ ಉಲ್–ಹಸನ್ ಅವರು ಮಾತನಾಡಿ, ವಿದ್ಯಾರ್ಥಿಗಳು ಮೇಜರ್ ಧ್ಯಾನಚಂದ್ ಅವರಂತೆ ಕ್ರೀಡಾ ಆಸಕ್ತಿಯನ್ನು ಬೆಳೆಸಿಕೊಂಡು, ಸದೃಢ ದೇಹದೊಂದಿಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಕರೆ ನೀಡಿದರು. "ಆಡಿದರೆ ದೇಶ ಅರಳುತ್ತದೆ" ಎಂಬ ಘೋಷವಾಕ್ಯವನ್ನು ಉಚ್ಚರಿಸಿದ ಅವರು, ದೇಶಭಕ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರತಿದಿನ ಆಟವಾಡುವುದು ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಅತ್ಯಗತ್ಯ ಎಂದು ಹೇಳಿದರು.

ಐ.ಕ್ಯೂ.ಎ.ಸಿ. ಸಂಚಾಲಕರಾದ ಶಶೀಧರ್ ಎಸ್. ಅವರು ಪ್ರಾಸ್ತಾವಿಕ ನುಡಿಗಳಲ್ಲಿ ಮೇಜರ್ ಧ್ಯಾನಚಂದ್ ಮತ್ತು ಕ್ರೀಡಾ ದಿನದ ಮಹತ್ವವನ್ನು ವಿವರಿಸಿದರು. ಈ ದಿನದ ವಿಶೇಷ ಅತಿಥಿಯಾಗಿದ್ದ 35ನೇ ಬಟಾಲಿಯನ್‌ನ ಸೈನಿಕ ಸಿಂಘಾರ ಸಿಂಗ್ ಅವರು ವಿದ್ಯಾರ್ಥಿಗಳಿಗೆ ದೇಶಪ್ರೇಮ ಮತ್ತು ಶಿಸ್ತಿನ ಮಹತ್ವದ ಕುರಿತು ಪ್ರೇರಣಾತ್ಮಕ ಭಾಷಣ ಮಾಡಿದರು. ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥರಾದ ಡಾ. ಸೈಯದ್ ಮುಜೀಬ್ ಅಹ್ಮದ್ ಅವರು ಎಲ್ಲರಿಗೂ ರಾಷ್ಟ್ರೀಯ ಕ್ರೀಡಾ ದಿನದ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ವತಿಯಿಂದ ನಡೆದ ತಾಲ್ಲೂಕು ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಸಂವಿಧಾನದ ಕುರಿತು ಪ್ರಬಂಧ ಬರೆದು ಪ್ರಥಮ ಸ್ಥಾನ ಹಾಗೂ 15,000 ರೂ. ನಗದು ಬಹುಮಾನ ಪಡೆದಿದ್ದ ಪ್ರಥಮ ವರ್ಷದ ಬಿ.ಸಿ.ಎ. ವಿದ್ಯಾರ್ಥಿನಿ ಕು. ಶ್ವೇತಾ ತಂ/ ಅಯ್ಯಣ್ಣ ಅವರನ್ನು ಕಾಲೇಜಿನ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಕಾಲೇಜಿನ ಸಾಂಸ್ಕೃತಿಕ ಘಟಕದ ಸಂಚಾಲಕರಾದ ಡಾ.ಚನ್ನಬಸವ ಮಾಡಗಿರಿ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಗಣಿತ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ರವಿ ಎಂ.,ಕನ್ನಡ ವಿಭಾಗದ ಮುಖ್ಯಸ್ಥರಾದ ಚಂದ್ರು ಎನ್. ಹೊಸೂರು, ವಾಣಿಜ್ಯಶಾಸ್ತ್ರ ವಿಭಾಗದ ಸುಧಾ ಆರ್. ಭೌತಶಾಸ್ತ್ರ ವಿಭಾಗದ ಹರ್ಷಿತಾ, ಎನ್.ಸಿ.ಸಿ. ಘಟಕದ ಸಂಚಾಲಕರಾದ ಉಸ್ಮಾನ್ ಬಾಷಾ ಉಪಸ್ಥಿತರಿದ್ದರು.

## ಮೊದಲನೇಯ ಪುಟದಿಂದ

# ಸಚಿವ ಬೋಸರಾಜು ರಾಜೀನಾಮೆಗೆ ಕರ್ನಾಟಕ ರೈತ ಸಂಘ ಆಗ್ರಹ

ಎಂದು ನೀಲಗಲ್ ಆಗ್ರಹಿಸಿದರು. ಒಂದು ವೇಳೆ ಸಚಿವರು ರಾಜೀನಾಮೆ ನೀಡದಿದ್ದರೆ, ಕರ್ನಾಟಕ ರೈತ ಸಂಘದ ವತಿಯಿಂದ ಜಿಲ್ಲೆಯಾದ್ಯಂತ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.ಈ ಸಂದರ್ಭದಲ್ಲಿ ಚಿಟ್ಟಿಬಾಬು, ರಮೇಶ ಪಾಟೀಲ್, ಬಿ.ಎನ್. ಯರಿದಾಳ್, ಹುಲಿಗಪ್ಪ ಸಿರವಾರ, ನಾಗರಾಜ, ಹನುಮಂತ, ಶಿವರಾಜ ದೊಡ್ಡಿ, ಮಲ್ಲೇಶ ಮದ್ಲಾಪುರ್, ಚಿಕ್ಕಯ್ಯ ಕುರ್ಡಿ ಮತ್ತು ಕಳರಾಯ ಸುಂಕೇಶ್ವರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಭ್ರಷ್ಟಾಚಾರ ತೊಲಗಿದಲ್ಲಿ ಭಾರತ ನಂ.1 ದೇಶವಾಗಲಿದೆ: ಉಪ ಲೋಕಾಯುಕ್ತ ಬಿ.ವೀರಪ್ಪ

ಅನೇಕ ಮಹನಿಯರು ಈ ದೇಶಕ್ಕಾಗಿ ಹೋರಾಡಿ ಪ್ರಾಣ ತ್ಯಾಗ ಮಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ಜಗತ್ತಿನಲ್ಲಿಯೇ ಅತಿ ಹೆಚ್ಚು ಪದವಿ ಗಳಿಸಿದ ಮಹಾನ್ ಮೇದಾವಿಯಾಗಿದ್ದರು. ಇಂತಹ ಮಹನಿಯರ ಜೀವನದ ಗುಣಗಳನ್ನು ನಮ್ಮ ಜೀವನದಲ್ಲಿ ಶೇ.05ರಷ್ಟು ಅಳವಡಿಸಿಕೊಂಡರೆ ನಾವು ಬದಲಾಗಿ ಸಮಾಜ ತನ್ನಿಂತಾನೆ ಸುಧಾರಣೆಯಾಗಲಿದೆ ಎಂದು ತಿಳಿಸಿದರು.

ಒಂದು ಖಾತಾ ಮಾಡೋಕೆ ತಿಂಗಳುಗಟ್ಟಲೇ ಸಮಯ ತೆಗೆದುಕೊಳ್ಳುತ್ತಿದ್ದಾರೆ. ಇದು ಸರಿಯಲ್ಲ. ಕೆಲ ಅಧಿಕಾರಿಗಳ ಮತ್ತು ಸಿಬ್ಬಂದಿಯ ಕಾರ್ಯವೈಖರಿ ಕಂಡು ಜನರು ಬೇಸತ್ತಿದ್ದಾರೆ. ತಮ್ಮ ಹಕ್ಕಿಗಾಗಿ ಸಿಡಿದೇಳುವ ಕಾಲ ದೂರವಿಲ್ಲ ಎಂದು ಉಪ ಲೋಕಾಯುಕ್ತರು ಎಚ್ಚರಿಕೆ ನೀಡಿದರು.

ನಾವುಗಳು ನಮ್ಮ ಹಕ್ಕಿಗಾಗಿ ಹೋರಾಡೋಣ. ಜೊತೆಗೆ ಸರಿಯಾದ ದಾರಿಯಲ್ಲಿ ನಡೆಯೋಣ. ನಾವು ಸರಿಯಾಗಿ ಆತ್ಮವಿಮರ್ಶೆ ಮಾಡಿಕೊಳ್ಳದಿದ್ದರೆ ನಮಗೆ ಉಳಿಗಾಲವಿಲ್ಲ ಎಂಬ ಅರಿವು ಇರಬೇಕು ಎಂದು ಉಪ ಲೋಕಾಯುಕ್ತರು ಜನತೆಗೆ ಸಲಹೆ ಮಾಡಿದರು.

ಮಹನಿಯರ ಫೋಟೊ ಬಳಸಬೇಡಿ: ಮಹನಿಯರ ಭಾವಚಿತ್ರಗಳನ್ನು ಲೇಟರ ಹೆಡ್ ನಲ್ಲಿ ಬಳಸಬಾರದು. ತಿಳಿವಳಿಕೆಯಿಲ್ಲದೇ, ಮನಸಿಗೆ ಬಂದಂತೆ ಲೇಟರ್ ಬಳಕೆ ಮಾಡುವುದು ತಪ್ಪಾಗುತ್ತದೆ ಎಂದು ಲೋಕಾಯುಕ್ತರು ತಿಳಿಸಿದರು.

ಗ್ರಾಪಂ ಸದಸ್ಯರಲ್ಲಿ ಮನವಿ: ಆಯಾ ಗ್ರಾಮಗಳಲ್ಲಿನ ಗಲೀಜು ನೀರು ಕೆರೆ, ಬಾವಿಗೆ, ನದಿಗೆ ಹರಿಯಬಾರದು. ಆ ನೀರಿಗೆ ಇಂಗುಗುಂಡಿ ಮಾಡಿಸಲು ಜಿಲ್ಲೆಯಲ್ಲಿನ ಎಲ್ಲ ಗ್ರಾಮ ಪಂಚಾಯತಗಳ ಸದಸ್ಯರು ಕಾಳಜಿ ವಹಿಸಬೇಕು ಎಂದು ಉಪ ಲೋಕಾಯುಕ್ತರು ಸಲಹೆ ಮಾಡಿದರು.

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮಾತನಾಡಿದರು. ಸಮಾರಂಭದಲ್ಲಿ ಗೌರವಾನ್ವಿತ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ.ಹೆಚ್.ಎ.ಸಾತ್ವಿಕ, ಬೆಂಗಳೂರಿನ ಉಪ ಲೋಕಾಯುಕ್ತ ಕಚೇರಿಯ ಅಪರ ನಿಬಂಧಕರಾದ ರಮಾಕಾಂತ ಚವ್ಹಾಣ್, ಶಿವಾಜಿ ಅನಂತ ನಲವಾಡೆ, ಉಪ ನಿಬಂಧಕರಾದ ಅರವಿಂದ, ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಬಿ.ಚಿಟುಗುಬ್ಬಿ, ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬೀನ್ ಮೊಹಪಾತ್ರ, ಕರ್ನಾಟಕ ಲೋಕಾಯುಕ್ತದ ಡಿಎಸ್ಪಿಗಳಾದ ರವಿ ಪುರಷೋತ್ತಮ ಉಪಸ್ಥಿತರಿದ್ದರು.

ಕೊಪ್ಪಳ ಡಿಎಸ್ಪಿ ವಸಂತಕುಮಾರ ನಿರೂಪಿಸಿದರು. ಮಹಾಲಕ್ಷ್ಮಿ ಅವರು ನಾಡಗೀತೆ ಹೇಳಿದರು.

# ಭ್ರಷ್ಟ ಅಧಿಕಾರಿಗಳನ್ನು ನಾನು ಬಿಡುವುದಿಲ್ಲ: ಜಸ್ಟೀಸ್ ಬಿ.ವೀರಪ್ಪ ಆಕ್ರೋಶ

ಸ್ವಲ್ಪಮಟ್ಟಿನ ವಿಶ್ವಾಸವಿದೆ ಎಂದರು.

**ಕಳವಳ:** ಹಿಂದಿನ ಜನರಲ್ಲಿದ್ದ ಆ ಕೆಚ್ಚು, ರೊಚ್ಚು ಈಗಿನ ಜನರಲ್ಲಿ ಇಲ್ಲ. ಸ್ವಾತಂತ್ರ್ಯದ ಸಂದರ್ಭ 100ಕ್ಕೆ 95 ಜನ ದೇಶಭಕ್ತರು ಇದ್ದರು. ಈಗಿನ ಪರಿಸ್ಥಿತಿ ಬೇರೆಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದಲ್ಲಿ ಶಿಕ್ಷಣದ ಪ್ರಮಾಣವು ಶೇ.18 ರಷ್ಟು ಇತ್ತು. ಈಗ ಅದರ ಪ್ರಮಾಣ ಶೇ.80ರಷ್ಟು ಹೆಚ್ಚಾಗಿದೆ. ಆದರು ನಾವು ಜನರಿಗೆ ಪೂರ್ಣ ಪ್ರಮಾಣದಲ್ಲಿ ಸ್ಪಂದಿಸುತ್ತಿಲ್ಲ ಎನ್ನುವ ನೋವು ನನಗಿದೆ ಎಂದು ಉಪ ಲೋಕಾಯುಕ್ತರು ಕಳವಳ ವ್ಯಕ್ತಪಡಿಸಿದರು.

ಒಬ್ಬ ಯೋಧ ತೀರಿದರೆ ಆತನ ಹೆಂಡತಿ ವಿಧವೆಯಾಗುತ್ತಾಳೆ. ಆತನ ಮಕ್ಕಳು ತಬ್ಬಲಿಯಾಗುತ್ತಾರೆ. ಅವರ ಕುಟುಂಬ ಅತಂತ್ರವಾಗುತ್ತದೆ. ಅನೇಕ ಯೋದರು ಗಡಿಭಾಗದಲ್ಲಿ ನಿಮಿಷ ನಿಮಿಷಕ್ಕೂ ಸಾಯುತ್ತಿದಾರೆ. ಅವರ ಪ್ರಾಣಾರ್ಪಣೆಯಿಂದ ನಮ್ಮ ರಕ್ಷಣೆ ಆಗುತ್ತಿದೆ. ಆದರೆ ನಾವು ನಮ್ಮ ಸ್ವಾರ್ಥಕೋಸ್ಕರ ದೇಶ ಹಾಳು ಮಾಡುತಿದ್ದೇವೆ ಎಂದು ತಿಳಿಸಿದರು.

ಸುಳ್ಳು ಅರ್ಜಿಗೆ ಮಾನ್ಯ ಮಾಡಲ್ಲ: ಲೋಕಾಯುಕ್ತ ಕಚೇರಿಯಲ್ಲಿ 25 ಸಾವಿರ ಕೇಸ್ ಪೆಂಡಿಂಗ್ ಇದೆ. ರಾಜ್ಯದ 7 ಕೋಟಿ ಜನರಿಗೆ ಲೋಕಾಯುಕ್ತರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ರಾಜ್ಯದೆಲ್ಲೆಡೆ ಸುತ್ತಿ ನಾವು ದೂರುಗಳ ವಿಲೆಗೆ ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇವೆ. ಸುಖಾಸುಮ್ಮನೆ ಕಾಡುವ, ವೈಯಕ್ತಿಕ ಹಿತಾಸಕ್ತಿಯ ಅರ್ಜಿಗಳಿಗೆ ನಾವು ಮಾನ್ಯ ಮಾಡುವುದಿಲ್ಲ. ನ್ಯಾಯಯುತ ಅರ್ಜಿಗಳಿಗೆ ನಾವು ಪ್ರಾಮಾಣಿಕವಾಗಿ ಸ್ಪಂದಿಸುತ್ತೇವೆ ಎಂದು ತಿಳಿಸಿದ ಉಪ ಲೋಕಾಯುಕ್ತರು, ಸುಳ್ಳು ಅರ್ಜಿದಾರರಿಗೆ ಕಲಂ 20ರಡಿ ಜೈಲು ಮತ್ತು ದಂಡ ಶಿಕ್ಷೆಗೆ ಗುರಿಪಡಿಸುತ್ತೇವೆ. ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳು ಮತ್ತು ಸಿಬ್ಬಂದಿಯು ಲೋಕಾಯುಕ್ತ ಎಂದಾಕ್ಷಣ ಹೆದರಬಾರದು ಎಂದರು.

# ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಆರ್ಥಿಕ ದಿವಾಳಿ :ಕೆ.ವಿರೂಪಾಕ್ಷಪ್ಪ

ಸರಕಾರದ ಜನರಿಗೆ ಮಾಡುತ್ತಿರುವ ಅನ್ಯಾಯದ ಬಗ್ಗೆ ಮನವರಿಕೆ ಮಾಡಿಕೊಡುವ ಮೂಲಕ, ಪಕ್ಷ ಸಂಘಟನೆ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ಎಂದು ಶಾಸಕ ಮಾನಪ್ಪ ವಜ್ಜಲ್ ಕರೆ ನೀಡಿದರು.

ಪದಗ್ರಹಣ : ಲಿಂಗಸುಗೂರು ಮಂಡಲ ಅದ್ಯಕ್ಷರಾಗಿ ಕೆ.ನಾಗಭೂಷಣ. ಮುದಗಲ್ ಮಂಡಲ ಅದ್ಯಕ್ಷರಾಗಿ ಹುಲ್ಲೇಶ ಸಾಹುಕಾರ ಆಯ್ಕೆಯಾಗಿದ್ದು, ನೂತನ ಸಾರಥಿಗಳಿಗೆ ಸಮಾರಂಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಪಾಟೀಲ್ ಲೆಕ್ಕಿದಾಳ ಪಕ್ಷದ ಧ್ವಜ ನೀಡುವ ಜೊತೆಗೆ ಆದೇಶ ಪತ್ರಗಳನ್ನು ವಿತರಿಸಿ ಪದಗ್ರಹಣವನ್ನು ನೆರವೇರಿಸಿಕೊಟ್ಟರು.

ಈ ಸಂದರ್ಭದಲ್ಲಿ ಮಾಜಿ ಸಂಸದ ಬಿವಿ ನಾಯಕ, ಮಾಜಿ ಶಾಸಕ ಪ್ರತಾವಗೌಡ ಪಾಟೀಲ್, ಮುಖಂಡರಾದ ಬಸನಗೌಡ ಬ್ಯಾಗವಾಟ್, ರಾಜಾ ಸೋಮನಾಥ ನಾಯಕ, ಹರಿಪ್ರಸಾದ, ಬಸವಂತರಾಯ ಕುರಿ. ಸಂತೋಷ ರಾಜಗುರು, ಜೂಲೆಪ್ಪ ನಾಯಕ, ಗಿರಿಮಲ್ಲನಗೌಡ ಸೇರಿದಂತೆ ಇದ್ದರು

# ಶ್ರೀ ನಂದ ವಸತಿ ಶಾಲೆ ವಿದ್ಯಾರ್ಥಿಗಳು ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ

**ಬಳ್ಳಾರಿ, ಆ.29–**ನಗರದ ಕ್ರೀಡಾಂಗಣದಲ್ಲಿ ನಡೆದ ಪ್ರಾಥಮಿಕ ಪಶ್ಚಿಮವಲಯದ ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾಗಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸತ್ಯಸಾಯಿ. ರನ್ನಿಂಗ್,–600ಟ, 400ಟ, 200ಟ ಬಾಲಕರ ವಿಭಾಗದಲ್ಲಿ ಪ್ರಥಮ, ಕಾವ್ಯ ಶ್ರೀ ಕೆ. ರನ್ನಿಂಗ್,–600ಟ, ಪ್ರಥಮ ಸ್ಥಾನ 400ಟ ನಲ್ಲಿ ದ್ವಿತೀಯ ಸ್ಥಾನ , ಜಿತೇಂದ್ರ,–ಹಾಡಲ್ಸ್ ದ್ವಿತೀಯ ಸ್ಥಾನ,ತೇಜಸ್ವಿನಿ100 ಮೀಟರ್ ರನ್ನಿಂಗ್ ನಲ್ಲಿ ತೃತೀಯ ಸ್ಥಾನ,ಪೃಥ್ವಿರಾಜ್ ಉದ್ದಜಿಗಿತ ದಲ್ಲಿ ತೃತೀಯ ಸ್ಥಾನ ಹಾಗೂ ರಿಲೇ ಆಟದಲ್ಲಿ ಕಾವ್ಯ ಶ್ರೀಕೆ,ಐಶ್ವರ್ಯ,ದೇವಿಕಾ ಶ್ರಾವ್ಯ ಕೃತಿಯ




ಸ್ಥಾನ ಪಡೆದಿದ್ದಾರೆ.ಮತ್ತು

ಸತ್ಯಸಾಯಿ ಮತ್ತು ಕಾವ್ಯ ಶ್ರೀ ಕೆ ಮುಂಬರುವ ತಾಲೂಕ ಮಟ್ಟದ ಕ್ರೀಡಾ ಕೂಟಕ್ಕೆ ಆಯ್ಕೆ ಯಾಗಿದ್ದಾರೆ.

# ಸಿರವಾರ: ವಿವಿಧೆಡೆ ಗಣೇಶ ಮೂರ್ತಿಗಳ ಸ್ಥಾಪನೆ

**ಯುವ ಮಾರ್ಗ ಸುದ್ದಿ**

**ಸಿರವಾರ, ಆ.29–** ಪಟ್ಟಣದ ವಿವಿಧೆಡೆ ಗಜಾನನ ಸಮಿತಿಗಳಿಂದ ಗಣೇಶನ ಮೂರ್ತಿಗಳನ್ನು ಪ್ರತಿಷ್ಠಾನ ಮಾಡಲಾಗಿದ್ದು ಗಣೇಶ ಚತುರ್ಥಿ ಅಂಗವಾಗಿ ಸಾರ್ವಜನಿಕರುಮತ್ತು ಭಕ್ತರು ಬುಧವಾರ ಸಂಜೆ ಗಣೇಶನ ದರ್ಶನ ಹಾಗೂ ಆಶೀರ್ವಾದ ಪಡೆದರು.

ಪಟ್ಟಣದ 6ನೇ ವಾರ್ಡಿನ ವಿಜಯನಗರ ಕಾಲೋನಿಯ ಗಣೇಶನ ದರ್ಶನ ಪಡೆದ ಪಟ್ಟಣ ಪಂಚಾಯತಿ ಸದಸ್ಯರಾದ ಹಾಜಿ ಚೌದ್ರಿ, ಕೃಷ್ಣ ನಾಯಕ, ಗ್ಯಾನಪ್ಪ ಅವರು ಸಾರ್ವಜನಿಕರೊಂದಿಗೆ ವಿಶೇಷ ಪೂಜೆ ಹಾಗೂ ಸೇವೆ ಸಲ್ಲಿಸಿ ಆಶೀರ್ವಾದ ಪಡೆದುಕೊಂಡರು, ಅದೇ ರೀತಿ ದೇವದುರ್ಗ ಕ್ರಾಸ್‌ನ ಸಜ್ಜಲ ಶ್ರೀಮಠದಲ್ಲಿನ ವೀರ ಸಾವಾರಕರ್ ಗಜಾನನ ಸಮಿತಿಯಿಂದ ಪ್ರತಿಷ್ಠಾನ ಮಾಡಲಾದ ಗಣೇಶ ಮೂರ್ತಿ ದರ್ಶನ ಪಡೆದರು, ಬಿ.ಬಿ.ಪಾಟೀಲ್ ಕಾಲೋನಿ, ವಾಲ್ಮೀಕಿ ವೃತ್ತ, ಮಹಾತ್ಮಾ ಗಾಂಧಿ



ಕಾಲೋನಿ, ತಾಯಮ್ಮ ದೇವಸ್ಥಾನ, ಅಂಚೆ ಕಚೇರಿಯ ಏರಿಯಾ, ಈಶ್ವರ ದೇವಸ್ಥಾನ, ಎಪಿಎಂಸಿ ಯಾರ್ಡ್, ಇಂದಿರಾ ನಗರ ಕಾಲೋನಿ, ದುರುಗಮ್ಮ ಕಾಲೋನಿ ಸೇರಿದಂತೆ ವಿವಿಧೆಡೆ ಗಣೇಶ ಮೂರ್ತಿಗಳ ಪ್ರತಿಷ್ಠಾನ ಮಾಡಲಾಗಿದ್ದು ಸಾರ್ವಜನಿಕರು ಎಲ್ಲಾ ಗಣೇಶ ಮೂರ್ತಿಗಳ ದರ್ಶನ ಪಡೆದುಕೊಂಡರು.

# ಲೊಯೋಲ ಕಾಲೇಜಿನಲ್ಲಿ ಜೀವ ವೈವಿಧ್ಯತೆಯಲ್ಲಿ ಪಕ್ಷಿಗಳ ಪಾತ್ರ ಕುರಿತು ಕಾರ್ಯಗಾರ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.29–** ಪಟ್ಟಣದ ಲೊಯೋಲ ಕಾಲೇಜಿನ ಸಭಾಂಗಣದಲ್ಲಿ ಕಾಲೇಜಿನ ಇಕೋ ಕ್ಲಬ್ ವತಿಯಿಂದ ನಡೆದ ಜೀವ ವೈವಿಧ್ಯತೆಯಲ್ಲಿ ಪಕ್ಷಿಗಳ ಪಾತ್ರ ಕುರಿತು ನಡೆದ ಒಂದು ದಿನದ ಕಾರ್ಯಗಾರಕ್ಕೆ ಚಾಲನೆ ನೀಡಿ ಲೊಯೋಲ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಫಾ.ಸಿರಿಲ್ ರಾಜ್ ಮಾತನಾಡಿ, ಪ್ರಕೃತಿಯಲ್ಲಿನ ಪ್ರತಿ ಜೀವಿಕೂಡ ಮಾನವನ ಉಳಿವಿಗೆ ಬಹುದೊಡ್ಡ ಪಾತ್ರವನ್ನು ವಹಿಸುತ್ತವೆ. ಪ್ರಕೃತಿಯಲ್ಲಿನ ಪ್ರತಿಯೊಂದು ಜೀವಿ ಕೂಡ ಒಂದನೋಂದು ಅವಲಂಭಿಸಿದ್ದು ಮಾನವ ಕೂಡ ಹೊರತಾಗಿಲ್ಲ ಪ್ರಕೃತಿಯಲ್ಲಿ ಪಕ್ಷಿ ಗಳೂ ಕೂಡ ಒಂದು ಭಾಗವಾಗಿದ್ದು ಪಕ್ಷಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದಕ್ಕಾಗಿ ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪಟ್ಟಣದ ಪಕ್ಷಿ ಪ್ರೇಮಿ ಸಲ್ಲಾವುದ್ದೀನ್ ಮಾತನಾಡಿ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಅನೇಕ ಪ್ರಭೇದದ ಪಕ್ಷಿಗಳನ್ನು ನಾವು ಕಾಣಬಹುದು ಅವುಗಳಲ್ಲಿ ಗ್ರೇಟ್ ಇಂಡಿಯನ್ ಬಸ್ಟರ್ಡ್,ಗುಬ್ಬಚ್ಚಿ ಗಳು ಸೇರಿದಂತೆ ವಿವಿಧ ಪಕ್ಷಿಗಳ ಸಂತಾತಿಗಳು ಇಂದು ಅಳಿವಿನ ಅಂಚಿನಲ್ಲಿವೆ ಪಕ್ಷಿಗಳು ಮರಗಳಲ್ಲಿನ ಹಣ್ಣು




ಗಳನ್ನು ತಿಂದು ಅವುಗಳಲ್ಲಿನ ಬೀಜಗಳನ್ನು ದೂರದ ಪ್ರದೇಶಗಳಲ್ಲಿ ತಮ್ಮ ಹಿಕ್‌ಯ ಮೂಲಕ ಪಸರಿಸುವ ಮೂಲಕ ಗಿಡಮರಗಳು ಬೆಳೆಯುವುದಕ್ಕೆ ನೆರವಾಗುತ್ತವೆ ಕಾಡಿನ ಬೆಳವಣಿಗೆಗೆ ಪಕ್ಷಿಗಳ ಪಾತ್ರವಿದೆ ರೈತರ ಜಮೀನುಗಳಲ್ಲಿ ಬೆಳೆದಿರುವ ಬೆಳೆಗಳಿಗೆ ಹಾನಿ ಮಾಡುವ ಕ್ರಿಮಿ ,ಕೀಟಗಳನ್ನು ಹೆಕ್ಕಿ ತಿನ್ನುವ ಮೂಲಕ ರೈತರ ಬೆಳೆಗಳನ್ನು ರಕ್ಷಿಸುತ್ತವೆ ಅದ್ದರಿಂದ ಹಕ್ಕಿಗಳನ್ನು ರಕ್ಷಿಸಬೇಕು ಎಂದು ತಿಳಿಸಿದರು.

ಕಾರ್ಯಗಾರದಲ್ಲಿ ಕಾಲೇಜಿನ ಉಪಪ್ರಾಚಾರ್ಯರಾದ ಕಾಸಿಂ , ವಿಜ್ಞಾನ ಉಪನ್ಯಾಸಕರಾದ ಪ್ರತಿಭಾ ಚೈತ್ರ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಮಳೆಯಲ್ಲಿ ನಡೆದು ಹಾಸ್ಟೇಲ್‌ಗೆ ಭೇಟಿ ನೀಡಿ ಪರಿಶೀಲಿಸಿದ ಉಪ ಲೋಕಾಯುಕ್ತರಾದ ಬಿ.ವೀರಪ್ಪ

**ಯುವ ಮಾರ್ಗ ಸುದ್ದಿ**

**ರಾಯಚೂರು,ಆ.29–**ಉಪ ಲೋಕಾಯುಕ್ತರಾದ ನ್ಯಾಯ ಮೂರ್ತಿ ಬಿ ವೀರಪ್ಪ ಅವರು ಆಗಸ್ಟ್ 28ರಂದು ತಮ್ಮ ಅನಿರೀಕ್ಷಿತ ಭೇಟಿ ಕಾರ್ಯಕ್ರಮವನ್ನು ರಾತ್ರಿ ವೇಳೆ 9.30ರವರೆಗೆ ಮುಂದುವರೆಸಿದರು.



ರಾತ್ರಿ 8 ಗಂಟೆ ಸುಮಾರಿಗೆ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯಕ್ಕೆ ಭೇಟಿ ನೀಡಿ ಹೊರ ಬಂದಾಗ ಮಳೆ ಸುರಿಯಲು ಆರಂಭಿಸಿತು.

ಅಲ್ಲಿಂದ ಮಳೆಯಲ್ಲಿಯೇ ಗಾಡಿ ಏರಿ ನೇರವಾಗಿ ಅಜಾದ್ ನಗರದಲ್ಲಿನ ಸಮಾಜ ಕಲ್ಯಾಣ ಇಲಾಖೆಯ ಬಾಲಕಿಯರ ವಸತಿ ನಿಲಯಕ್ಕೆ ಆಗಮಿಸಿದರು.

ಅಲ್ಲಿನ ಊಟ, ವಸತಿ ಸೌಕರ್ಯದ ಬಗ್ಗೆ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದರು.

ತಾವು ಓದುವ ಕಾಲದಲ್ಲಿ ಶಾಲೆ ಕಟ್ಟೆ ಹತ್ತುವದೇ ಕಷ್ಟವಾಗಿತ್ತು. ಬೀದಿ ದೀಪದ ಬೆಳಕಿನಲ್ಲಿ ಓದಿದೆವು. ಮಹಿಳೆಯರ ಪರಿಸ್ಥಿತಿಯಂತು ಇನ್ನು ಶೋಚನಿಯವಾಗಿತ್ತು. ಈಗ ಅಂತಹ ಪರಿಸ್ಥಿತಿ ಇಲ್ಲ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಂತಹ ಅನೇಕ ಮಹನಿಯರ ಶ್ರಮ ಹೋರಾಟದಿಂದ ನಮಗೆ ಸಂವಿಧಾನ ಬದ್ಧ ಹಕ್ಕು ಜಾರಿಯಾಗಿ ಎಲ್ಲರಿಗೂ ಒದಲು ಸಾಧ್ಯವಾಗಿದೆ. ಓದುವ ಸಮಯದಲ್ಲಿ ಹಾದಿ ತಪ್ಪಬಾರದು. ತಂದೆ ತಾಯಿಗೆ ಮೋಸ ಮಾಡದೇ ಸರಿಯಾಗಿ ಓದಿ ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಉಪ ಲೋಕಾಯುಕ್ತರು ವಿದ್ಯಾರ್ಥಿನಿಯರಿಗೆ ಸಲಹೆ ಮಾಡಿದರು.

**ವಾರ್ಡನ ಕಾರ್ಯಕ್ಕೆ ಮೆಚ್ಚುಗೆ:** ವಸತಿ ನಿಲಯದ ವಾರ್ಡನ್ ಪ್ರೇಮಾ ಮಲೇಷಿಯಾ ಅವರು ಸರಿಯಾಗಿ ನೋಡ್ತಾರಾ? ನಿಮಗೆ ಸರಿಯಾಗಿ ಮಾರ್ಗದರ್ಶನ ಮಾಡ್ತಾರಾ? ನಿಮ್ಮ ಮೆಡಂ ಒಳ್ಳೆಯವರಾ? ಎಂದು ಉಪ ಲೋಕಾಯುಕ್ತರು ಕೇಳಿದಾಗ, ಎಲ್ಲ ವಿದ್ಯಾರ್ಥಿನಿಯರು ಒಟ್ಟಿಗೆ ಹೌದು ಸರ್ ಎಂದು ಜೋರು ಧ್ವನಿಯಲ್ಲಿ ಹೇಳಿ ವಾರ್ಡನ ಕಾರ್ಯ ವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಬೆಂಗಳೂರಿನ ಉಪ ಲೋಕಾಯುಕ್ತ ಕಚೇರಿಯ ಅಪರ ನಿಬಂಧಕರು ಆಗಿರುವ ನ್ಯಾಯಾಧೀಶರಾದ ರಮಾಕಾಂತ ಚವ್ಹಾಣ್, ಶಿವಾಜಿ ಅನಂತ ನಲವಾಡೆ, ಉಪ ನಿಬಂಧಕರು ಆಗಿರುವ ನ್ಯಾಯಾಧೀಶರಾದ ಅರವಿಂದ, ಗೌರವಾನ್ವಿತ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ.ಹೆಚ್.ಎ.ಸಾತ್ವಿಕ, ಜಿಲ್ಲಾಧಿಕಾರಿ ನಿತೀಶ್ ಕೆ, ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬೀನ್ ಮೊಹಪಾತ್ರ ಮತ್ತು ರಾಯಚೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಬಿ.ಚಿಟುಗುಬ್ಬಿ, ಕರ್ನಾಟಕ ಲೋಕಾಯುಕ್ತ ಪೊಲೀಸನ ರಾಯಚೂರು ಡಿಎಸ್ಪಿ ರವಿ ಪುರಷೋತ್ತಮ, ಕೊಪ್ಪಳ ಡಿಎಸ್ಪಿ ವಸಂತಕುಮಾರ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಸಿಂದು, ಲೋಕಾಯುಕ್ತ ಪೊಲೀಸ್ ನಿರೀಕ್ಷಕರಾದ ಕಾಳಪ್ಪ ಬಡಿಗೇರ, ಚಂದ್ರಪ್ಪ, ಸುನೀಲ್ ಮೇಗಲಮನಿ, ಶೈಲಜಾ ಮತ್ತು ನಾಗರತ್ನ ಇತರರು ಇದ್ದರು.

# ಬಸವ ಸಂಸ್ಕೃತಿ ಅಭಿಯಾನ ಯಶಸ್ಸಿಗೆ ಅಕ್ಕ ಗಂಗಾಂಬಿಕಾ ಪಾಟೀಲ ಕರೆ

**ಚಿಂಚೋಳಿ,ಆ.29–** ಬೀದರ ನಗರದಲ್ಲಿ ಲಿಂಗಾಯತ ಮಠಾದಿಪತಿಗಳ ಒಕ್ಕೂಟ ಹಾಗೂ ಬಸವ ಸಂಸ್ಕೃತಿ ಅಭಿಯಾನ ಸಮಿತಿ ಸೆ.3ರಂದು ಹಮ್ಮಿಕೊಂಡ ಬೃಹತ್ ಬಸವ ಸಂಸ್ಕೃತಿ ಅಭಿಯಾನ ಯಶಸ್ಸಿಗೆ ಬಸವ ಸೇವಾ ಪ್ರತಿಷ್ಠಾನದ ಅಕ್ಕ ಗಂಗಾಂಬಿಕಾ ಪಾಟೀಲ ಕರೆ ನೀಡಿದರು.ಅವರು ತಾಲ್ಲೂಕಿನ ಚಿಮ್ಮನಚೋಡ ಗ್ರಾಮದಲ್ಲಿ ಬಸವ ಪರುಷ ಕಟ್ಟೆ ಸಮಿತಿ ಶ್ರಾವಣ ಮಾಸದ ಪ್ರಯುಕ್ತ ಹಮ್ಮಿಕೊಂಡ ಶರಣ ಚಿಂತನ ಉಪನ್ಯಾಸ ಮಾಲಿಕೆಯ ಸಮಾರೋಪ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕರೆಂದು ಕರ್ನಾಟಕ ಸರ್ಕಾರ ಘೋಷಿಸಿ ಒಂದು ವರ್ಷವಾಗಿದ್ದು, ನಾಡಿನನೂರಾರು ಮಠಾಧೀಶರ ನೇತೃತ್ವದಲ್ಲಿ ನಡೆಯುವ ಅಭಿಯಾನದಲ್ಲಿ ಲಿಂಗ, ರುದ್ರಾಕ್ಷಿ, ವಿಭೂತಿ ಹಾಗೂ ಶರಣರ ವೇಷಧಾರಿಗಳ ಮೆರವಣಿಗೆ ವೈಭವದಿಂದ ಜರುಗಲಿದೆ.ಬಸವಣ್ಣನವರ ಆಶಯದಂತೆ ಸಮ ಸಮಾಜ ನಿರ್ಮಾಣ ಮತ್ತು ಬಸವಣ್ಣನವರ ತತ್ವಾದರ್ಶಗಳ ಕುರಿತು ಜಾಗೃತಿ ಮೂಡಿಸಲು ಈ ಕಾರ್ಯಕ್ರಮ



ಆಯೋಜಿಸಲಾಗಿದೆ ಎಂದರು.ಕಾರ್ಯಕ್ರಮದಲ್ಲಿ ನಿವೃತ್ತ ಸರ್ಜನ್ ಡಾ. ಸಿ. ಎಸ್ ರಗಟೆ,ಗವಿಸಿದ್ದಪ್ಪ ಪಾಟೀಲ, ಮಹೇಶ ಬಡಿಗೇರ್, ಎಕೆಆರ್ ದೇವಿ ಪಿಯು ಕಾಲೇಜಿನ ಪ್ರಾಂಶುಪಾಲ ವಿದ್ಯಾಸಾಗರ ದೇಶಮುಖ್, ಜಗನ್ನಾಥ ಶೇರಿಕಾರ, ಜಗದೀಶ ಮರಪಳ್ಳಿ, ಚಂದ್ರಯ್ಯ ಸ್ವಾಮಿ, ಉದಯಕುಮಾರ ಪಾಟೀಲ, ಉದ್ಯಮಿ ಲಿಂಗಾರತಿ ನಾವದಗೇರ್, ಮಂಜುನಾಥ ದುಬಲಗುಂಡಿ ಮೊದಲಾದವರು ಇದ್ದರು. ಪರುಷ ಕಟ್ಟೆ ಸಮಿತಿ ಅಧ್ಯಕ್ಷ

# ಅಪ್ಪಾಜಿ ಮಾರ್ಗದರ್ಶನದ ದಾಸೋಹ ಪರಂಪರೆ ನಿರಂತರ: ಚಿ. ದೊಡ್ಡಪ್ಪ ಅಪ್ಪಾಜಿ



**ಕಲಬುರಗಿ,ಆ.29–** ನಮ್ಮ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಂದು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದ್ದಾರೆ. ನಿಮ್ಮೆಲ್ಲರ ಪ್ರೀತಿ ವಿಶ್ವಾಸಗಳಿಂದ ನನ್ನನ್ನು ನಿಮ್ಮ ಮನೆಯ ಮಗನೆಂದು ತಿಳಿದು ಅಪ್ಪಾಜಿಯವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ದಾಸೋಹ ಪರಂಪರೆಯನ್ನು ಮುಂದುವರೆಸಿಕೊಂಡು ನನ್ನ ಜೀವನವನ್ನು ಸಮಾಜ ಕಲ್ಯಾಣಕ್ಕಾಗಿ ಮುಡಿಪಾಗಿಡುತ್ತೇನೆಂದು ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಚಿರಂಜೀವಿ ದೊಡ್ಡಪ್ಪ ಅಪ್ಪಾಜಿ ಭಕ್ತಾದಿಗಳಿಗೆ ಭರವಸೆ ನೀಡಿದರು.

ಶರಣಬಸವೇಶ್ವರ ದೇವಾಲಯದ ಆವರಣದಲ್ಲಿರುವ ಅನುಭವ ಮಂಟಪದಲ್ಲಿ ಗುರುವಾರದಂದು ಏರ್ಪಡಿಸಿದ್ದ ಲಿಂಗೈಕ್ಯ ಪರಮಪೂಜ್ಯ ಡಾ. ಶರಣಬಸವಪ್ಪ ಅಪ್ಪಾ ಅವರ ಸನ್ನಿಧಿಗೆ ನುಡಿ ಪುಷ್ಪಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಲಿಂಗೈಕ್ಯ ಪೂಜ್ಯ ಶರಣಬಸವಪ್ಪ ಅಪ್ಪಾಜಿಯವರು ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದರು. ಸಾವಿರಾರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಎಲ್ಲರಿಗೂ ಪ್ರೀತಿಯ ಅಪ್ಪಾಜಿಯೆಂದೇ ಚಿರಪರಿಚಿತರೆಂದು ತಿಳಿಸಿದರು.

ಮೊದಲಿಗೆ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ಹಾಗೂ ಚಿರಂಜೀವಿ ದೊಡ್ಡಪ್ಪ ಅಪ್ಪಾಜಿ, ಅವರ ಸಹೋದರಿಯರ ಜೊತೆ ಸೇರಿಕೊಂಡು ಲಿಂಗೈಕ್ಯ ಪೂಜ್ಯ ಡಾ. ಅಪ್ಪಾಜಿಯವರ ಸಮಾಧಿಗೆ ಪೂಜೆ ಸಲ್ಲಿಸಿದರು. ನಂತರ ನುಡಿ ಪುಷ್ಪಾಂಜಲಿ ಕಾರ್ಯಕ್ರಮದಲ್ಲಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿಯವರ ಸ್ಮರಣಾರ್ಥ ಎರಡು ನಿಮಿಷಗಳ ಕಾಲ ಮೌನಾಚರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶದ ಶ್ರೀಶೈಲಂನ ಸಾರಂಗಮಠದ ಪೂಜ್ಯ ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳು ಮಾತನಾಡಿ ಲಿಂಗೈಕ್ಯ ಪೂಜ್ಯ ಡಾ. ಅಪ್ಪಾಜಿಯವರು ಎಂದಿಗೂ ಹೋಮ ಹವನ ಮಾಡದೆ ಇಷ್ಟಲಿಂಗ ಪೂಜೆ ಮಾಡಿ ತ್ರಿವಿಧ ದಾಸೋಹಿಗಳಾಗಿ ಬಸವ ತತ್ವ ಪಾಲನೆ ಮಾಡುತ್ತಿದ್ದರು. ದೆಹಲಿಯಲ್ಲಿ ಸಂಸತ್ತಿನ 9ನೇ ಮಹಾದ್ವಾರದಲ್ಲಿ ಮಹಾತ್ಮ ಬಸವೇಶ್ವರರ ಪುತ್ಥಳಿಯನ್ನು ಸ್ಥಾಪನೆ ಮಾಡಿದ್ದು ಅಪ್ಪಾಜಿಯವರ ಒಂದು ಮಹಾ ಸಾಧನೆ ಎಂದರು. ಇದೇ ಸಮಯದಲ್ಲಿ ಬೆಳಗುಂಪಾದ ಪೂಜ್ಯ ಅಭಿನವ ಪರ್ವತೇಶ್ವರ ಸ್ವಾಮೀಜಿಗಳು ಮಾತನಾಡುತ್ತಾ ಲಿಂಗೈಕ್ಯ ದೊಡ್ಡಪ್ಪ ಅಪ್ಪಾಜಿಯವರು ಅಂದು ಅನ್ನದಾಸೋಹ ಮಾಡಿ ಶಿಕ್ಷಣದಾಸೋಹಕ್ಕೆ ಚಾಲನೆ ನೀಡಿದ್ದರು. ಅದನ್ನು ಪೂಜ್ಯ ಡಾ. ಅಪ್ಪಾಜಿಯವರು ಮುಂದುವರೆಸಿಕೊಂಡು ಅನ್ನದಾಸೋಹದ ಜತೆಗೆ ಶಿಕ್ಷಣಕ್ಕೆ ಮಹತ್ವ ಕೊಟ್ಟು ಇಂದು ವಿಶ್ವವಿದ್ಯಾಲಯದ ಮಟ್ಟಕ್ಕೆ ಬೆಳೆಸಿದ್ದಾರೆ. ಚಿರಂಜೀವಿ ಅಪ್ಪಾಜಿಯವರಿಗೆ ನೋಡಿದರೆ ಲಿಂಗೈಕ್ಯ ದೊಡ್ಡಪ್ಪ ಅಪ್ಪಾಜಿಯವರ ಪ್ರತಿರೂಪದಂತೆ ಕಾಣಿಸುತ್ತಾರೆ. 8ನೇ ವರ್ಷಕ್ಕೆ 80ವರ್ಷದಂತಹ ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ ಎಂದು ಹೇಳಿದರು.

ಚೌಡಾಪುರಿ ಹೀರೆಮಠದ ಡಾ. ರಾಜಶೇಖರ ಶಿವಾಚಾರ್ಯರು, ನುಡಿ ಪುಷ್ಪಾಂಜಲಿ ಸಲ್ಲಿಸುತ್ತಾ ಪೂಜ್ಯ ಡಾ. ಅಪ್ಪಾಜಿಯವರು ದೂರದೃಷ್ಟಿ ಉಳ್ಳವರಾಗಿದ್ದರು ಅವರಲ್ಲಿ ಯಾವುದೇ ಅಹಂಭಾವವಿರಲಿಲ್ಲ, ದೀನರಿಗೆ ದಲಿತರಿಗೆ ಬಡವರಿಗೆ ಶಿಕ್ಷಣ ದಾಸೋಹ ಗೈಯ್ಯುತ್ತಿದ್ದರು. ಅವರಿಗೆ ಆರೋಗ್ಯದ ಬಗ್ಗೆ ಬಹಳ ಕಾಳಜಿಯಿತ್ತು. ಆಯುರ್ವೇದ ತಿಳಿವುಳ್ಳವರಾಗಿದ್ದರು. ಚಿರಂಜೀವಿ ದೊಡ್ಡಪ್ಪ ಅಪ್ಪಾಜಿಯವರಿಗೆ ನೋಡಿದರೆ ಶರಣರೇ ಭೂಮಿಗೆ ಬಂದ ಅನುಭವವಾಗುತ್ತದೆ ಎಂದರು.

ಪೂಜ್ಯ ಡಾ. ಅಪ್ಪಾಜಿಯವರ ಮಕ್ಕಳಾದ ಕು. ಶಿವಾನಿ ಎಸ್. ಅಪ್ಪ, ಕು. ಭವಾನಿ ಎಸ್. ಅಪ್ಪ ಹಾಗೂ ಕು. ಮಹೇಶ್ವರಿ ಎಸ್. ಅಪ್ಪ "ಅಪ್ಪಾ ಐ ಲವ್ ಯು ಪಾ" ಎಂಬ ಹಾಡನ್ನು ಸುಶ್ರಾವ್ಯವಾಗಿ ಹಾಡುವಾಗ ಎಲ್ಲರ ಕಣ್ಣಂಚಿನಲ್ಲಿ ನೀರು ಚಿಗುರೊಡೆದಿತ್ತು. ತದನಂತರ ಎಲ್ಲರೂ ಸೇರಿ ತಮ್ಮ ತಂದೆ ಪೂಜ್ಯ ಡಾ. ಅಪ್ಪಾಜಿಯವರಿಗೆ ನುಡಿ ಪುಷ್ಪಾಂಜಲಿ ಸಲ್ಲಿಸಿದರು.

ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ತಮ್ಮ ಅಶೀರ್ವಚನದಲ್ಲಿ ಮಾತನಾಡಿ, ಪೂಜ್ಯ ಡಾ. ಅಪ್ಪಾಜಿಯವರು ನನ್ನ ಕಾಯಕ, ನನ್ನ ಕರ್ತವ್ಯ, ನನ್ನ ಉಸಿರಿನಲ್ಲಿ ಇನ್ನೂ ಜೀವಂತವಾಗಿದ್ದಾರೆ. ಬಡವರಿಗೆ ಶಿಕ್ಷಣ ದೊರೆಯಬೇಕೆಂಬುವುದು ಅವರ ಮಹಾದಾಸೆಯಾಗಿತ್ತು. ಇಂದು ಕೆಜಿಯಿಂದ ಪಿಜಿವರೆಗೆ ಶಿಕ್ಷಣವನ್ನು ವಿಸ್ತರಿಸಿದ್ದಾರೆ. ಅಂದು 30 ವಿದ್ಯಾರ್ಥಿಗಳಿಂದ ಆರಂಭವಾದ ಈ ಸಂಸ್ಥೆ ಇಂದು 35 ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದೆ. ಅಪ್ಪಾಜಿಯವರ ಆರೋಗ್ಯದಲ್ಲಿ ಏರು-ಪೇರಾದಾಗ ಬೆಂಗಳೂರಿನಲ್ಲಿ ಅವರ ವಿದ್ಯಾರ್ಥಿಗಳೇ ಅವರಿಗೆ ಚಿಕಿತ್ಸೆ ಕೊಟ್ಟಿದ್ದರೆಂದು ನೆನಪಿಸಿಕೊಂಡರು.

ಪೂಜ್ಯ ಡಾ. ಅಪ್ಪಾಜಿಯವರು ಲೋಕ ಕಲ್ಯಾಣ ಮಾಡಿ ದೇಶಕ್ಕೆ ಮಾದರಿಯಾಗಿದ್ದಾರೆ. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದಡಿಯಲ್ಲಿ ಬರುವ ಎಲ್ಲಾ ಉದ್ಯೋಗಿಗಳು ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಹೀಗೆ ತಮ್ಮೆಲ್ಲರ ಸಹಕಾರದಿಂದ ನನ್ನ ಕೊನೆಯ ಉಸಿರು ಇರುವವರೆಗೆ ಪೂಜ್ಯ ಅಪ್ಪಾಜಿಯವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನುಗುತ್ತೇನೆಂದರು. ಮುಂದಿನ ದಿನಗಳಲ್ಲಿ ತಮ್ಮೆಲ್ಲರ ಬೆಂಬಲವಿರುತ್ತದೆಂದು ಹಾಗೂ ನನ್ನ ಜೊತೆ ಸಂಸ್ಥಾನದ 9ನೇ ಪೀಠಾಧಿಪತಿಗಳಿಗೆ ನಿಮ್ಮ ಪ್ರೀತಿ, ವಿಶ್ವಾಸ ತೋರುವಿರೆಂದು ನಂಬಿದ್ದೇನೆ. ಎಂದೆಂದಿಗೂ ನಿಮ್ಮೆಲ್ಲರ ಸಹಕಾರವಿರಲಿ ಎಂದರು.

ಈ ಸಂಧರ್ಭದಲ್ಲಿ ಸಚಿವ ಶರಣಪ್ರಕಾಶ ಪಾಟೀಲ ಅವರ ಪತ್ನಿ ಭಾಗ್ಯಶ್ರೀ ಪಾಟೀಲ ಮಾತನಾಡಿದರು. ಲಿಂಗೈಕ್ಯ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿಯವರಿಗೆ ನುಡಿ ಪುಷ್ಪಾಂಜಲಿ ಸಲ್ಲಿಸಿದವರಲ್ಲಿ ಶರಣಬಸವಪ್ಪ ನಿಷ್ಠಿ, ಶಾಸಕರಾದ ಬಿ. ಆರ್. ಪಾಟೀಲ, ಶಶೀಲ ಜಿ. ನಮೋಶಿ, ಅಲ್ಲಮಪ್ರಭು ಪಾಟೀಲ, ಬಿ. ಜಿ. ಪಾಟೀಲ, ಮಾರುತಿರಾವ್ ಮೂಳೆ, ಮಾಜಿ ಸಂಸದರಾದ ಬಸವರಾಜ ಪಾಟೀಲ ಸೇಡಂ, ಡಾ. ಉಮೇಶ ಜಾಧವ, ಮಾಜಿ ಶಾಸಕರಾದ ದತ್ತಾತ್ರೇಯ ಪಾಟೀಲ ರೇವೂರ, ದೊಡ್ಡಪ್ಪಗೌಡ ಪಾಟೀಲ ನರಿಬೋಳ ಪ್ರಮುಖರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಶ್ರೀ ಬಸವರಾಜ ದೇಶಮುಖ, ಬಸವರಾಜ ಭೀಮಳ್ಳಿ, ಡಾ. ಭೀಮಾಶಂಕರ ಬಿಲಗುಂದಿ, ಶಾಸಕ ಬಸವರಾಜ ಮತ್ತಿಮೂಡ, ರಾಜು ಭೀಮಳ್ಳಿ, ಶಿವಶರಣಪ್ಪ ವಾಲಿ, ಶಾಸಕ ಎಮ್. ವಾಯ್. ಪಾಟೀಲ, ಅಪ್ಪಾರಾವ್ ಅಕ್ಕೋಣಿ, ಲಕ್ಷ್ಮಣ ದಸ್ತಿ, ಅರುಣಕುಮಾರ ಪಾಟೀಲ, ಎಸ್. ಎಮ್. ಹೀರೆಮಠ, ಶರಣಪ್ಪ ಹಲ್ಸೆ, ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಅನಿಲಕುಮಾರ ಬಿಡವೆ, ನಿರ್ದೇಶಕ ಪ್ರೊ. ವಿ. ಡಿ. ಮೈತ್ರಿ, ಡೀನ್ ಡಾ. ಲಕ್ಷ್ಮೀ ಪಾಟೀಲ ಮಾಕಾ ಸಂಘದ ಎಲ್ಲಾ ಶಾಲಾ ಕಾಲೇಜುಗಳ ಪ್ರಾಂಶುಪಾಲರು ವಿವಿಯ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು ಸೇರಿದಂತೆ ಇತರ ಪ್ರಮುಖರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ದಯಾನಂದ ಹೊಡಲ್ ನಿರೂಪಿಸಿದರು. ಡಾ. ನೀಲಾಂಬಿಕಾ ಪೋಲಿಸ್ ಪಾಟೀಲ ಸ್ವಾಗತಿಸಿದರು.

# ಉಪ ಲೋಕಾಯುಕ್ತ ರಿಂದ ಸಾರ್ವಜನಿಕ ಅಹವಾಲು ಸ್ವೀಕಾರ, ಕುಂದುಕೊರತೆ, ದೂರು ವಿಚಾರಣೆ



**ಯುವ ಮಾರ್ಗ ಸುದ್ದಿ**

**ರಾಯಚೂರು,ಆ.29–**ಉಪ ಲೋಕಾಯುಕ್ತರಾದ ಗೌರವಾನ್ವಿತ ನ್ಯಾಯಮೂರ್ತಿ ಬಿ ವೀರಪ್ಪ ಅವರು ಆಗಸ್ಟ್ 29ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಸಾರ್ವಜನಿಕ ಅಹವಾಲು, ಕುಂದುಕೊರತೆ ಮತ್ತು ದೂರು ವಿಚಾರಣೆ ಕೈಗೊಂಡರು.

ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಆಗಸ್ಟ್ 29ರ ಸಂಜೆ 4.45ರವರೆಗೆ ಸ್ವೀಕೃತವಾದ 320 ಅಹವಾಲು ಅರ್ಜಿಗಳ ಪೈಕಿ ಸಂಜೆ 4.45ರವರೆಗೆ 100 ಅರ್ಜಿಗಳ ಬಗ್ಗೆ ಉಪ ಲೋಕಾಯುಕ್ತರು, ಆಯಾ ಇಲಾಖೆಯ ಅಧಿಕಾರಿಗಳನ್ನು ಕರೆದು ದೂರುಗಳ ಬಗ್ಗೆ ವಿಚಾರಣೆ ನಡೆಸಿದರು.

ದೂರು ಅರ್ಜಿ ನೋಂದಾಯಿಸಿದ ಅರ್ಜಿದಾರರ ಹೆಸರು ಮತ್ತು ದೂರಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯ ಇಲಾಖೆ ಮತ್ತು ಹೆಸರನ್ನು ಮೈಕನಲ್ಲಿ ಕೂಗಿ, ಅವರಿಗೆ ವೇದಿಕೆಗೆ ಕರೆದು ವಿಚಾರಣೆ ಪ್ರಕ್ರಿಯೆ ನಡೆಸಲಾಯಿತು.

ಬೆಂಗಳೂರಿನ ಉಪ ಲೋಕಾಯುಕ್ತ ಕಚೇರಿಯ ಅಪರ ನಿಬಂಧಕರು ಆಗಿರುವ ನ್ಯಾಯಾಧೀಶರಾದ ರಮಾಕಾಂತ ಚವ್ಹಾಣ್, ಶಿವಾಜಿ ಅನಂತ ನಲವಾಡೆ, ಉಪ ನಿಬಂಧಕರು ಆಗಿರುವ ನ್ಯಾಯಾಧೀಶರಾದ ಅರವಿಂದ, ಗೌರವಾನ್ವಿತ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ.ಹೆಚ್.ಎ.ಸಾತ್ವಿಕ, ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬೀನ್ ಮೊಹಪಾತ್ರ ಮತ್ತು ರಾಯಚೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಬಿ.ಚಿಟುಗುಬ್ಬಿ ಹಾಗೂ ಇತರರ ಸಮಕ್ಷಮದಲ್ಲಿ ಉಪ ಲೋಕಾಯುಕ್ತರು ಸಂಜೆ 4.45ರವರೆಗೆ 100 ಅರ್ಜಿಗಳ ವಿಚಾರಣೆ ನಡೆಸಿ, ಬಾಕಿ ಅರ್ಜಿಗಳ ವಿಚಾರಣೆ ಪ್ರಕ್ರಿಯೆಯನ್ನು ಮುಂದುವರೆಸಿದರು.

ಕರ್ನಾಟಕ ಲೋಕಾಯುಕ್ತ ಪೊಲೀಸನ ರಾಯಚೂರು ಡಿಎಸ್ಪಿ ರವಿ ಪುರಷೋತ್ತಮ, ಕೊಪ್ಪಳ ಡಿಎಸ್ಪಿ ವಸಂತಕುಮಾರ ಹಾಗೂ ಪೊಲೀಸ್ ನಿರೀಕ್ಷಕರಾದ ಕಾಳಪ್ಪ ಬಡಿಗೇರ, ಚಂದ್ರಪ್ಪ, ಸುನೀಲ್ ಮೇಗಲಮನಿ, ಶೈಲಜಾ ಮತ್ತು ನಾಗರತ್ನ ಅವರು ನೋಂದಣಿ, ಫೈಲಿಂಗ್, ಟೋಕನ್ ನಂಬರ್ ವಿತರಣೆ ನಾನಾ ಕಾರ್ಯದ ಮೂಲಕ ಉಪ ಲೋಕಾಯುಕ್ತರ ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸಿದರು.

ಬೆಳಗಿನ ಅವಧಿಯಲ್ಲಿ ವಿಚಾರಣೆಗೆ ಎತ್ತಿಕೊಂಡ ಅರ್ಜಿಗಳ ಪೈಕಿ ಹೆಚ್ಚಿನ ದೂರುಗಳು ತಹಸೀಲ್ ಕಚೇರಿ ಮತ್ತು ಮಹಾನಗರ ಪಾಲಿಕೆಗೆ ಸಂಬಂಧಿಸಿದ್ದವು.

**ಮುಂದುವರೆದ ವಿಚಾರಣೆ:** ಮಧ್ಯಾಹ್ನ ಊಟದ ವಿರಾಮದ ನಂತರವು ಸಹ ಉಪ ಲೋಕಾಯುಕ್ತರು ಅಹವಾಲು ಅರ್ಜಿಗಳ ವಿಚಾರಣೆಯನ್ನು ಮುಂದುವರೆಸಿದರು.

**ತಾತ್ಕಾಲಿಕ ನ್ಯಾಯಾಲಯ ನಿರ್ಮಾಣ:** ಉಪ ಲೋಕಾಯುಕ್ತರಿಂದ ಸಾರ್ವಜನಿಕ ಅಹವಾಲು, ಕುಂದುಕೊರತೆ ಮತ್ತು ದೂರುಗಳ ವಿಚಾರಣೆಗಾಗಿ ಕೃಷಿ ವಿವಿಯ ಜಗಜ್ಯೋತಿ ಬಸವೇಶ್ವರ ಸಭಾಂಗಣದ ಮೇಲೆ ಶಿಸ್ತುಬದ್ದವಾಗಿ ಟೇಬಲ್ ಮತ್ತು ಖುರ್ಚಿ ಅಳವಡಿಸಿ, ಕಡತ, ಕಾಗದ ಪತ್ರಗಳನ್ನಿಟ್ಟು ಸಭಾಂಗಣವನ್ನು ತಾತ್ಕಾಲಿಕ ನ್ಯಾಯಾಲಯವನ್ನಾಗಿ ಮಾರ್ಪಡಿಸಲಾಗಿತ್ತು.

ನೋಂದಣಿಗೆ ವ್ಯವಸ್ಥೆ: ಉಪ ಲೋಕಾಯುಕ್ತರ ಬಳಿಯಲ್ಲಿ ದೂರು ಸಲ್ಲಿಸಲು ಬರುವ ಸಾರ್ವಜನಿಕರಿಗೆ ನೋಂದಣಿಗಾಗಿ ಆಡಿಟೋರಿಯಂ ಹಾಲನ ಪ್ರವೇಶ ದ್ವಾರದ ಬಳಿಯ ಎರಡೂ ಕಡೆಯಲ್ಲಿ ಕಂಪ್ಯೂಟರ್ ಅಳವಡಿಸಿ ಮತ್ತು ಸಿಬ್ಬಂದಿಯನ್ನು ನಿಯೋಜಿಸಿ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ಸಹಾಯಕ ಆಯುಕ್ತರಾದ ಗಜಾನನ ಬಾಳೆ ಹಾಗೂ ಲೋಕಾಯುಕ್ತ ಕಚೇರಿ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಕಾಮಗಾರಿ ಗುಣಮಟ್ಟ ಕಾಪಾಡಿ :ಶಾಸಕ ಶರಣಗೌಡ ಕಂದಕೂರ

**ಗುರುಮಠಕಲ್,ಆ.29–**ಸರ್ಕಾರದಿಂದ ಕ್ಷೇತ್ರಕ್ಕೆ ಅನುದಾನ ತರಲು ಎಷ್ಟು ತೊಂದರೆಯಿದೆ ಎಂಬುದು ಎಲ್ಲರಿಗೂ ತಿಳಿದಿದೆ, ನಾನು ವಿಧಾನಸಭೆ ಹೊರಗೆ ಹಾಗೂ ಒಳಗೆ ನಿಮ್ಮೆಲ್ಲರ ಧ್ವನಿಯಾಗಿ ಮಾತನಾಡಿ, ಅನುದಾನ ಬಿಡುಗಡೆಗೆ ಹಾಗೂ ಕ್ಷೇತ್ರದ ಬದಲಾವಣೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದು ಗುರಮಠಕಲ್ ಶಾಸಕ ಶರಣಗೌಡ ಕಂದಕೂರ ಹೇಳಿದರು.

ಗುರುಮಠಕಲ್ ಮತಕ್ಷೇತ್ರದ ಸೌದಾಗರ ತಾಂಡಾದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ ಲೋಕೊಪಯೋಗಿ ಇಲಾಖೆಯಿಂದ ಹತ್ತಿಕುಣಿ ಗ್ರಾಮದಿಂದ-ಹತ್ತಿಕುಣಿ ಕ್ಯಾಂಪ್‌ವರೆಗೆ ರಾಜ್ಯ ಹೆದ್ದಾರಿ ರಸ್ತೆ 3 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವುದು, 1 ಕೋಟಿ ರೂ. ವೆಚ್ಚದಲ್ಲಿ ಸೌದಾಗಾರ ಕ್ರಾಸ್ ತಿರುವಿನಲ್ಲಿ ಅಪಘಾತ ವಲಯ ರಸ್ತೆ ಸುಧಾರಣೆ ಹಾಗೂ ಸೌದಾಗಾರ ತಾಂಡಾದ ಶಾಲೆಯಲ್ಲಿ 58 ಲಕ್ಷ ರೂ. ವೆಚ್ಚದಲ್ಲಿ 4 ಶಾಲಾ ಕೋಣೆಗಳ ನಿರ್ಮಾಣ ಕಾಮಗಾರಿಗಳಿಗೆ ಅಡಿಗಲ್ಲು ನೆರವೇರಿಸಿ ಮಾತನಾಡಿದರು.

ಪ್ರಸಕ್ತ ದಿನಗಳಲ್ಲಿ ಗುರುಮಠಕಲ್ ಮತಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು, ಅಂದಾಗ ಮಾತ್ರ ಜನರಿಗೆ ಬಹು ವರ್ಷ ಉಪಯೋಗಕ್ಕೆ ಅನುಕೂಲವಾಗುತ್ತದೆ, ಈ ನಿಟ್ಟಿನಲ್ಲಿ ಅಧಿಕಾರಿಗಳು ಎಚ್ಚರಿಕೆವಹಿಸಬೇಕೆಂದು ಎಚ್ಚರಿಕೆ ನೀಡಿದರು.

ಉತ್ತಮ ರಸ್ತೆಗಳಿದ್ದರೆ ಮಾತ್ರ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಸಾಧ್ಯ. ಹಾಗಾಗಿ ವಿಶೇಷ ಅನುದಾನದ ಮೂಲಕ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ನನ್ನ ಏಳಿಗೆ ಸಹಿಸದ ವಿರೋಧ ಪಕ್ಷದ ಕೆಲ ಮುಖಂಡರು ಸುಳ್ಳು ಆರೋಪ ಮಾಡುತ್ತಿದ್ದಾರೆ, ನಾನು ಅದಕ್ಕೆ ವಿಚಲಿತನಾಗದೇ ನಿರಂತರ ನಿಮ್ಮೆಲ್ಲರ ಕೆಲಸ ಮಾಡಲು ಆದ್ಯತೆ ನೀಡುತ್ತೇನೆ, ಬರುವ ದಿನಗಳಲ್ಲಿ ನಾವು ಮಾಡಿರುವ ಅಭಿವೃದ್ಧಿ ಕಾರ್ಯಗಳೇ ಅವರಿಗೆ ಉತ್ತರ ನೀಡಲಿವೆ ಎಂದರು.

ಕೆಲ ತಿಂಗಳ ಹಿಂದೆ ಯಾದಗಿರಿ-ಸೇಡಂ ರಾಜ್ಯ ಹೆದ್ದಾರಿ 6 ಕಿ.ಮಿ ಚಾಮನಳ್ಳಿ ಕ್ರಾಸ್‌ನಿಂದ ಯಡ್ಡಳ್ಳಿ ಗ್ರಾಮದವರೆಗೆ 6 ಕೋಟಿ ರೂ, ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ ಕೈಗೊಳ್ಳಲಾಗಿತ್ತು, ಆದರೆ ನಾನು ಇಂದು ಇಲ್ಲಿಗೆ ಬರುವಾಗ ಆ ರಸ್ತೆಯಲ್ಲಿ ಅಲ್ಲಲ್ಲಿ ತಗ್ಗು-ಗುಂಡಿಗಳು ಬಿದ್ದೀವೆ, ಇದರಿಂದ ವಾಹನ ಸಂಚಾರರಿಗೆ ತೊಂದರೆಯಾಗಿದೆ, ಜನರು ನನ್ನನ್ನು ಪ್ರಶ್ನಿಸುತ್ತಾರೆ, ನಾನು ಇದರ ಬಗ್ಗೆ ಅಧಿಕಾರಿಗಳೊಂದಿಗೆ ಮಾತನಾಡಿ ಅಸಮಧಾನ ವ್ಯಕ್ತಪಡಿಸಿ ದುರಸ್ಥಿಗೆ ಸೂಚಿಸಿದ್ದೇನೆ, ಹೆದ್ದಾರಿ ರಸ್ತೆಯ ಮೇಲೆ ಭಾರಿ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ



ಸಂಚಾರ ಮಾಡುತ್ತವೆ, ಕಾರಣ ಗುತ್ತಿಗೆದಾರರು ಉತ್ತಮವಾಗಿ ರಸ್ತೆ ನಿರ್ಮಾಣ ಮಾಡಿ, ಈ ವಿಷಯದಲ್ಲಿ ಲೋಪವಾದರೇ ಅಧಿಕಾರಿಗಳ ಮೇಲೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಆಕ್ರೋಶ ವ್ಯಕ್ತಪಡಿಸಿ, ಬರುವ ದಿನಗಳಲ್ಲಿ ಕ್ಷೇತ್ರದ ಗಡಿ ಭಾಗದ ಅಂತ್ಯದವರೆಗೆ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ತಿಳಿಸಿದರು.

ಕ್ಷೇತ್ರದಲ್ಲಿ ತಾಂಡಾದಲ್ಲಿರುವ ಜನರು ಪರಿಶ್ರಮ ಜೀವಿಗಳು ಹಲವಾರು ಕಷ್ಟಗಳ ಮದ್ಯೆ ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುತ್ತಿದ್ದಾರೆ, ಇದು ಉತ್ತಮ ಬೆಳವಣಿಗೆ ಈ ಭಾಗದಲ್ಲಿರುವ ತಾಂಡಾಗಳ ಮಕ್ಕಳಿಗೆ ಶೈಕ್ಷಣಿಕ ಬೆಳವಣಿಗೆ ಪೂರಕವಾಗಿ ಶಾಲೆ ಕೋಣೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ, ಬರುವ ದಿನಗಳಲ್ಲಿ ಈ ಶಾಲೆಯನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.ನಾನು ಕ್ಷೇತ್ರದಲ್ಲಿ ಶಾಂತಿ-ಸಾಮರಸ್ಯ ಕಾಪಾಡುವ ಜೊತೆಗೆ ಜನರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಆದ್ಯತೆ ಮೇರೆಗೆ ಅನುಷ್ಟಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲಾಧ್ಯಕ್ಷ ಸುಭಾಶ್ಚಂದ್ರ ಕಟಕಟಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ರಾಮಣ್ಣ ಬಳಿಚಕ್ರ, ಹಿರಿಯ ಮುಖಂಡರಾದ ಭೊಜಣ್ಣಗೌಡ ಯಡ್ಡಳ್ಳಿ, ಹತ್ತಿಕುಣಿ ಗ್ರಾಮ ಪಂಚಾಯತ ಅಧ್ಯಕ್ಷೆ ಅನ್ನಪೂರ್ಣ ಅಮೀನರಡ್ಡಿ ಬಿಳ್ಹಾರ ಮುಖಂಡರಾದ ಈಶ್ವರ ನಾಯಕ, ಮಲ್ಲರಡ್ಡಿಗೌಡ ಮಾಲಿ ಪಾಟೀಲ್ ಹತ್ತಿಕುಣಿ, ಸೋಮಣ್ಣಗೌಡ ಬೆಳಗೇರಾ, ಆನಂದರಡ್ಡಿ ವಡವಟ್, ಬಸ್ಸುಗೌಡ ಚಾಮನಳ್ಳಿ, ನರಸಪ್ಪ ಕಾವಡಿ, ಸಾಬಣ್ಣ ಹೋರುಂಚಾ, ಹೀರಾಸಿಂಗ್ ಪವಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಪಿ ಜಾನೇ, ಮಲ್ಲಿಕಾರ್ಜುನ ಪೂಜಾರಿ, ಲೋಕೋಪಯೊಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕೈಲಾಸ್ ಅನವಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪ್ರಾಸ್ತಾವಿಕವಾಗಿ ಪಿಡಬ್ಲುಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ ಪರಶುರಾಮ ಮಾತನಾಡಿ, ಕಾಮಗಾರಿಗಳ ಮಾಹಿತಿ ತಿಳಿಸಿದರು. ಶರಣು ಗಡೇದ್ ಸ್ವಾಗತಿಸಿ, ವಂದಿಸಿದರು.

# ಚೋಂಡಿ ಮುಖೇಡ ಗ್ರಾಮಕ್ಕೆ ಜಿಲ್ಲಾಧಿಕಾರಿ ಭೇಟಿ

**ಕಮಲನಗರ,ಅ.29–** ತಾಲೂಕಿನಲ್ಲಿ ಕಳೆದ ಎರಡು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ತಾಲೂಕಿನ ಚಿಕ್ಲಿ(ಯು) ಗ್ರಾಮ ಪಂಚಾಯತ ವ್ಯಾಪ್ತಿಯ ಚೋಂಡಿ ಮುಖೇಡ ಗ್ರಾಮಕ್ಕೆ ಮಾನ್ಯ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮೇಡಂ ಅವರು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು.ಗ್ರಾಮದಲ್ಲಿ ರಸ್ತೆ ಸಂಪರ್ಕ ಕಡಿತಗೊಂಡು ಜನಜೀವನ ಅಸ್ತವ್ಯಸ್ತಗೊಂಡಿದೆ. ಅಪಾಯವಿರುವ ಸ್ಥಳಗಳಿಗೆ ಜನ, ಜಾನುವಾರಗಳು ಹೋಗಬಾರದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಎ.ಸಿ ಮಹಮ್ಮದ್ ಶಕೀಲ್ ಸರ್, ಪ್ರೋಬೇಷನರಿ IAS ಅಧಿಕಾರಿ ರಮ್ಯಾ ಮೇಡಂ, ತಾ.ಪಂ.ನ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿ ಹಣಮಂತರಾಯ ಕೌಟಗೆ ಸರ್, ಮಾನ್ಯ ತಹಶೀಲ್ದಾರ್ ಅಮೀತಕುಮಾರ ಕುಲಕರ್ಣಿ ಸರ್ ಸೇರಿದಂತೆ ಗ್ರಾ.ಪಂ. ಸಿಬ್ಬಂದಿಗಳು ಹಾಜರಿದ್ದರು.



# ಬಸವ ಸಂಸ್ಕೃತಿ ಅಳವಡಿಸಿ ಕೊಳ್ಳಿ :ಸಿದ್ದಬಸವ ಕಬೀರ ಸ್ವಾಮಿ



**ಬೀದರ:ಅ.29:**ಬಸವಣ್ಣನವರನ್ನು ಪೂಜೆಗೆ ಸೀಮಿತಗೊಳಿಸದೆ ಅವರು ಸಾಂಸ್ಕೃತಿಕ ನಾಯಕ ಎಂಬುದು ಪ್ರತಿಬಿಂಬಿಸುವ ಕಾರ್ಯ ಮಾಡಲು ಪೂಜ್ಯ ಶ್ರೀ ಸಿದ್ದಬಸವ ಕಬೀರ ಸ್ವಾಮಿಗಳು ಸಲಹೆ ನೀಡಿದರು.

ಬಸವ ಕೇಂದ್ರ ಆಯೋಜಿಸಿರುವ ಶ್ರಾವಣ ಮಾಸದ ವಚನ ದರುಶನ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಸಮಾರೋಪದ ನುಡಿಯಲ್ಲಿ ಕಲಬುರಗಿ ಚಿದ್ರಳ್ಳಿ ಜಗದ್ಗುರು ಮರುಳ ಶಂಕರದೇವ ಗುರುಪೀಠದ ಮಹಾಸ್ವಾಮಿಗಳಾದ ಪೂಜ್ಯ ಶ್ರೀ ಸಿದ್ದಬಸವ ಕಬೀರ ಸ್ವಾಮಿಗಳು ಮುಂದುವರೆದು ನಮ್ಮಪ್ಪ ಮಾದಾರ ಚನ್ನಯ್ಯ ಎಂಬ ಔದಾರ್ಯ ತೋರಿ ಸಮಾನತೆ ಸಾರಿದ ಬಸವಣ್ಣ ಭುವನದ ಬೆಳಕು. ಶರಣರು ಮೊದಲು ನಡೆದು ತದನಂತರ ನುಡಿದಿದ್ದಾರೆ. ಅವರ ನಡೆ ನುಡಿ ಒಂದಾಗಿತ್ತು. ಬದುಕಿಗೆ ಬಂಗಾರ ಕೊಟ್ಟು ಭವಿಷ್ಯ ನಿರ್ಮಿಸಿದ ಬಸವಾದಿ ಶರಣರ ವಿಚಾರ ಒಂದು ತಿಂಗಳ ಕಾಲ ಶ್ರವಣ ಮಾಡಿದ್ದು ನಿವಾಗಿಯೂ ತಾವು ಪುಣ್ಯವಂತರು. ಇಂದು ಧಾರ್ಮಿಕ ಎಂದರೆ ಮೂಗು ಮುರಿಯುವ ಸಂದರ್ಭದಲ್ಲಿ ಇಷ್ಟೊಂದು ಜನ ಬಂದು ಬಸವ ಸಂಸ್ಕೃತಿ ಅಳವಡಿಸಿ ಕೊಳ್ಳುತ್ತಿರುವುದನ್ನು ಕಂಡು ಸಂತಸವಾಗಿದೆ.

ಇಂದು ಅನೇಕರು ಬಸವಣ್ಣನವರನ್ನು ಚಲಾವಣೆ ನಾಣ್ಯ ಮಾಡಿಕೊಂಡು ತಲೆ ಮೇಲೆ, ಹೆಗಲ ಮೇಲೆ ಹೊತ್ತು ಕೊಂಡವರಿದ್ದಾರೆ. ಆದರೆ ಬಸವಣ್ಣನವರನ್ನು ಹೃದಯದಲ್ಲಿ ಇಂಬಿಟ್ಟು ಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ. ಇದರಿಂದ ಜನರಲ್ಲಿ ನೆಮ್ಮದಿ ನೆಲೆಗೊಂಡು ಪರಿವರ್ತನೆ ಆಗಲು ಸಾಧ್ಯ. ಶರಣರಲ್ಲಿ ನಿಚ್ಚಳವಾದ ಮನಸ್ಸು ಅನುಭಾವ, ನಿರಂತರ ಕಾಯಕ ದಿಂದಲೇ ನಮಗೆ ಮಾದರಿಯಾಗಿದ್ದಾರೆಂದು ನುಡಿದರು.

ಅಧ್ಯಕ್ಷರು ಕ ರಾ ಸ ನೌ ಸಂಘದ ಅಧ್ಯಕ್ಷ ರಾದ ಸೋಮಶೇಖರ ಬಿರಾದಾರ ಚಿದ್ರಿ ಮಾತನಾಡಿ ಇಂದು ಸಮಾಜದ ಯುವಕರು ದಾರಿ ತಪ್ಪುತ್ತಿದ್ದಾರೆ, ಸಂಸ್ಕೃತಿ ಇಲ್ಲದಂತಾಗಿದೆ, ಇಂಥ ಪ್ರವಚನ ಚಿಂತನಾ ಗೋಷ್ಠಿ ಕಮ್ಮಟ ಶಿಬಿರಗಳಿಂದ ಯುವಶಕ್ತಿ ಜಾಗೃತಿಯಾಗಿ ಬರಡಾಗುತ್ತಿರುವ ಬದುಕಿಗೆ ಭವಿಷ್ಯ ರೂಪಿಸಿಕೊಳ್ಳಲು ಇದು ತುಂಬಾ ಒಳ್ಳೆಯ ಮಾರ್ಗವಾಗಿದೆ. ಇಂದು ಬಸವ ಕೇಂದ್ರ ಸಮಾಜೋಧಾರ್ಮಿಕ ಕಾರ್ಯದಲ್ಲಿ ತನ್ನನ್ನೇ ತಾನೆ ತೊಡಗಿಸಿಕೊಂಡು ಸಮಾಜದ ಅಂಕು ಡೊಂಕು ತಿದ್ದುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಮೊನ್ನೆ ತಾನೆ ಉಗಂಡಾ ದೇಶದಿಂದ ಮರಳಿ ಬಂದು ವಚನ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಅಲ್ಲಮ ಪ್ರಭು ನಾವದಗೇರೆ ಗೌರವ ಸನ್ಮಾನ ಸ್ವೀಕರಿಸಿ ನಮ್ಮ ಇಷೆ??ಲ್ಲ ಬೆಳವಣಿಗೆಗೆ ಬಸವ ಕೇಂದ್ರ ಸಂಸ್ಥೆಯೆ ಪ್ರಮುಖ ಕಾರಣವಾಗಿದೆ ನಮ್ಮಲ್ಲಿ ಸದಾಚಾರ ಸದ್ವಿನಯ ಸಮಭಾವ ಸಮನ್ವತೆ ಮೈಗೂಡಿಸಿ ಕೊಂಡಾಗ ಎಂಥ ಸಂಕಷ್ಟಮಯವಾದ ಕೆಲಸ ಕಾರ್ಯಗಳು ಮಾಡಲು ಆತ್ಮ ವಿಶ್ವಾಸ ಇಮ್ಮಡಿ ಗೊಳ್ಳುತ್ತದೆ. ಬಸವಣ್ಣ ಒಂದು ಅತ್ಯದ್ಭುತ ಮಹಾನ್ ಶಕ್ತಿ, ಅವರನ್ನು ಅನುಸರಿಸಿ ಕೊಂಡು ಮುನ್ನಡೆದರೆ ಬರುವ ಸಂಕಷ್ಟ ದೂರಾಗುವುದರಲ್ಲಿ ಸಂದೇಹವಿಲ್ಲ ಎಂಬುದಕ್ಕೆ ಸ್ವತಃ ನಾನೇ ಜ್ವಲಂತ ಸಾಕ್ಷಿ ಎಂದರು.

ಸಾನಿಧ್ಯ ವಹಿಸಿದ ಡಾ ಶಿವಾನಂದ ಮಹಾಸ್ಮಾಮಿಗಳು ಆಶೀರ್ವಚನ ನೀಡುತ್ತ.. ಶ್ರವಣ ಮನನದಿಂದ ನಮ್ಮ ವಿವೇಚನಾ ಲಹರಿ ಬದಲಾಗಿ ಧನಾತ್ಮಕ ಚಿಂತನೆಯಲ್ಲಿ ತೊಡಗಿಸಿ ಕೊಳ್ಳಲು ಸಾಧ್ಯ. ನಾವು ಎಷ್ಟೆ ಕೆಲಸದ ಒತ್ತಡದಲ್ಲಿದ್ದರು ಕನಿಷ್ಟ ಹತ್ತು ನಿಮಿಷಗಳ ಕಾಲವಾದರೂ ಇಷ್ಟಲಿಂಗ ಪೂಜೆ ಮಾಡಿಕೊಳ್ಳಬೇಕು. ಇದರಿಂದಾಗುವ ಲಾಭ ಹೇಳತೀರದ್ದಾಗಿದೆ. ಶರಣರು ಇಷ್ಟಲಿಂಗಧಾರೆಗಳಾಗಿ ಮಾಡಿದ ಕಾರ್ಯ ಒಂಭತ್ತು ನೂರು ವರ್ಷವಾದರೂ ನಮ್ಮೆಲ್ಲರ ಬದುಕಿಗೆ ದಾರಿ ದೀಪವಾಗಿದೆ ಎಂದರು. ಒಂದು ತಿಂಗಳ ಕಾಲ ವಚನ ದರ್ಶನ ಪ್ರವಚನ ಜ್ಞಾನ ದಾಸೋಹಗೈದ ಶ್ರೀ ಮಹಾಲಿಂಗೇಶ್ವರ ಮಠ ಸಿರಸಂಗಿ ಬೆಳಗಾವಿಯ ಪೂಜ್ಯ ಶ್ರೀ ಮ.ನಿ.ಪ್ರ. ಬಸವ ಮಹಾಂತ ಸ್ವಾಮಿಗಳು ತಮ್ಮ ಅನುಭಾವ ನಿವೇದನೆ ಮಾಡಿದರು. ಬಸವ ಕೇಂದ್ರ್ರದದಿಂದ ಪೂಜ್ಯರಿಗೆ ಗೌರವಿಸಿದರು. ಇದೇ ಸಂದರ್ಭದಲ್ಲಿ ಸೋಮಶೇಖರ್ ಬಿರಾದಾರ ಚಿದ್ರಿ, ಪ್ರಭುಲಿಂಗ ತುಗಾವೆ, ಶಂಕರರಾವ ಸಜ್ಜನಶೆಟ್ಟಿ ಬುದೇರೆ ಅವರನ್ನು ಸನ್ಮಾನಿಸಲಾಯಿತು.

ಸಂಸ್ಕೃತಿ, ಷಡಾಕ್ಷರಿ ವಚನ ನೃತ್ಯ ಸಭಿಕರ ಗಮನ ಸೆಳೆಯಿತು. ಅಶ್ವಿನಿ ರಾಜಕುಮಾರ ಹಿರೇಮಠ ವಚನ ಸಂಗೀತ ನಡೆಸಿಕೊಟ್ಟರು. ಕರುಣಾ ಶಟಕಾರ, ವಿದ್ಯಾವತಿ ಬಲ್ಲರ, ಪಂಪಾವತಿ ಪಾಟೀಲ, ಶೀಲಾವತಿ ಶೀಲವಂತ, ರಾಜಮ್ಮ ಚಿಕ್ಕಪೇಟ್ ವಚನ ಪ್ರಾರ್ಥನೆ ನಡೆಸಿ ಕೊಟ್ಟರು. ಕಾರ್ಯ ಕ್ರಮದ ಅಧ್ಯಕ್ಷತೆಯನ್ನು ಶರಣಪ್ಪ ಮಿಠಾರೆ ವಹಿಸಿದ್ದರು. ಕ.ಸಾ.ಪ.ಅಧ್ಯಕ್ಷರಾದ ಸುರೇಶ ಚನ್ನಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಶಿವಶಂಕರ ಟೋಕರೆ ನಿರೂಪಿಸಿದರೆ ಬಸವರಾಜ ಬಿರಾದಾರ ವಂದಿಸಿದರು.

# ರಾತ್ರಿ 8 ಗಂಟೆವರೆಗೆ ಕಚೇರಿಗಳ ಪರಿಶೀಲನೆ ಮುಂದುವರೆಸಿದ ಉಪ ಲೋಕಾಯುಕ್ತರಾದ ಬಿ.ವೀರಪ್ಪ

**ರಾಯಚೂರು,ಆ.29–** ಉಪ ಲೋಕಾಯುಕ್ತರಾದ ನ್ಯಾಯ ಮೂರ್ತಿ ಬಿ ವೀರಪ್ಪ ಅವರು ಆಗಸ್ಟ್ 28ರಂದು ಮದ್ಯಾಹ್ನ ಊಟದ ವಿರಾಮ ನಂತರ ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ, ಉಪ ನೋಂದಣಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ನಿರ್ಮಿತಿ ಕೇಂದ್ರ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಆಹಾರ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ರಾಯಚೂರು ಸಹಾಯಕ ಆಯುಕ್ತರ ಕಚೇರಿ ಮತ್ತು ಆರ್ ಟಿಓ ಕಚೇರಿ ಸೇರಿದಂತೆ ವಿವಿಧೆಡೆ ಸಂಚರಿಸಿ ಪರಿಶೀಲಿಸಿದರು.

ಮಧ್ಯಾಹ್ನ ಊಟದ ವಿರಾಮದ ನಂತರ ಸಂಜೆ 4 ಗಂಟೆಗೆ ಮತ್ತೆ ಕಾರ್ಯಾಚರಣೆಗಿಳಿದ ಉಪ ಲೋಕಾಯುಕ್ತರು ರಾತ್ರಿ 8 ಗಂಟೆವರೆಗೆ ಪರಿಶೀಲನೆ ಮುಂದುವರೆಸಿದರು.

ಆರ್ ಟಿಐ ಅರ್ಜಿ ವಿಲೇವಾರಿ ಮಾಡುವಲ್ಲಿ, ಕೆಲವರ ನಿವೃತ್ತಿ ವೇತನ ಮಂಜೂರಾತಿಗೆ ವಿಳಂಬ ಮಾಡಿದ್ದನ್ನು ಪರಿಶೀಲಿಸಿ ಡಿಡಿಪಿಐ ಕಚೇರಿಯ ವಿಷಯ ನಿರ್ವಾಹಕರ ವಿರುದ್ಧ ಉಪ ಲೋಕಾಯುಕ್ತರು ತರಾಟೆಗೆ ತೆಗೆದುಕೊಂಡರು.

ಸಂಜೆ 7.30ರ ಸುಮಾರಿಗೆ ಪ್ರಾದೇಶಿಕ ಸಾರಿಗೆ ಕಚೇರಿಗೆ ಭೇಟಿ ನೀಡಿದ ವೇಳೆ, 29 ಸಾವಿರ ವಾಹನಕ್ಕೆ ಎಫ್ ಸಿ ಇಲ್ಲ ಎಂಬ ಮಾಹಿತಿ ಪಡೆದು ಉಪ ಲೋಕಾಯುಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಯೊಂದು ವಾಹನಕ್ಕೆ ಕಡ್ಡಾಯ ಎಫ್ ಸಿ ಮಾಡಿಸಬೇಕು. ವಿಮೆ ಮಾಡಿಸಬೇಕು. ಶಾಲಾ ವಾಹನಗಳಿಗೆ ಕಡ್ಡಾಯ ಎಫ್‌ಸಿ ಇರಲೇಬೇಕು. ಎಫ್ ಸಿ ಇಲ್ಲದೇ ಶಾಲಾ ವಾಹನ ಓಡಿಸಿ ಒಂದು ವೇಳೆ ಅಪಘಾತ ಸಂಭವಿಸಿದಲ್ಲಿ ಯಾರಿಗು ಸಹ ಒಂದೇ ಒಂದು ಪೈಸೆ ಪರಿಹಾರ ಸಿಗುವುದಿಲ್ಲ ಎಂಬ ಅರಿವು ನಿಮಗಿರಲಿ ಎಂದು ಉಪ ಲೋಕಾಯಕ್ತರು, ಆರ್ ಟಿಓ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಎಚ್ಚರಿಕೆ ನೀಡಿದರು.

# ಹಾಸ್ಟೆಲ್‌ಗಳ ಅವ್ಯವಸ್ಥೆ ಕಂಡು ಉಪ ಲೋಕಾಯುಕ್ತರಾದ ಬಿ.ವೀರಪ್ಪ ಕೆಂಡಾಮಂಡಲ

**ಯುವ ಮಾರ್ಗ ಸುದ್ದಿ**



**ರಾಯಚೂರು,ಆ.28–** ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಆಗಸ್ಟ್ 28ರಂದು ಇಡೀ ದಿನ ಕಚೇರಿಗಳ ಭೇಟಿ ತರುವಾಯ ರಾತ್ರಿ 8 ಗಂಟೆ ಸುಮಾರಿಗೆ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಮಂತ್ರಾಲಯ ರಸ್ತೆಯಲ್ಲಿರುವ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯಕ್ಕೆ ಭೇಟಿ ನೀಡಿದರು.

ಈ ದಿನ ಮಾತ್ರ ನಾವು ಒಳ್ಳೆಯ ಊಟ ಮಾಡಿದ್ದೇವೆ. ಇದುವರೆಗೆ ನಮಗೆ ಸರಿಯಾಗಿ ಊಟ ನೀಡಿಲ್ಲ ಎಂದು ವಿದ್ಯಾರ್ಥಿಗಳು ದೂರಿದಾಗ ಹಾಸ್ಟೆಲ್ ವಾರ್ಡನ ಹಾಗೂ ಅಧಿಕಾರಿಗಳ ಕಾರ್ಯವೈಖರಿ ಕಂಡು ಕೆಂಡಾಮಂಡಲರಾದರು.

ಕೈ ತೊಳೆಯುವ ಸ್ಥಳದಲ್ಲಿ ಎಲ್ಲೆಂದರಲ್ಲಿ ಅನ್ನ ಬಿದ್ದಿರುವುದನ್ನು ಕಂಡು ಹಾಸ್ಟೇಲ್ ಹೀಗೆ ಇರಬೇಕಾ ಎಂದು ವಾರ್ಡನ್ ಮತ್ತು ಅಡುಗೆ ಸಿಬ್ಬಂದಿ ವಿರುದ್ದ ತರಾಟೆ ತೆಗೆದುಕೊಂಡರು.

ನಿಮ್ಮ ಮನೆ ಹೀಗೆ ಇಡ್ತೀರಾ.? ನಿಮ್ಮ ಮಕ್ಕಳಿಗೆ ಇದೆ ರೀತಿ ಊಟ ಕೊಡ್ತೀರಾ? ಎಂದು ಪ್ರಶ್ನಿಸಿದ ಉಪ ಲೋಕಾಯುಕ್ತರು, ಇಲ್ಲಿನ ಮಕ್ಕಳನ್ನು ತಮ್ಮ ಮಕ್ಕಳೆಂದು ಭಾವಿಸಿ ಅವರಿಗೆ ಸರಿಯಾಗಿ ಸೌಕರ್ಯ ಕಲ್ಪಿಸಬೇಕು ಎಂದು ಹಾಸ್ಟೆಲ್ ವಾರ್ಡನಗೆ ಎಚ್ಚರಿಕೆ ನೀಡಿದರು.

ಹಾಸ್ಟೆಲಗೆ ನಿಯಮಿತವಾಗಿ ಯಾಕೆ ಭೇಟಿ ನೀಡಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಅವರಿಗೆ ಉಪ ಲೋಕಾಯುಕ್ತರು ಪ್ರಶ್ನಿಸಿ, ಮಕ್ಕಳ ಬಗ್ಗೆ ಕಾಳಜಿ ವಹಿಸಲು ಸೂಚನೆ ನೀಡಿದರು. ಚಪಾತಿ ಸರಿಯಾಗಿ ಬೇಯದಿರುವುದನ್ನು ಖುದ್ದು ಗಮನಿಸಿದ ಉಪ ಲೋಕಾಯುಕ್ತರು, ಸರಿಯಾಗಿ ಅಡುಗೆ ಮಾಡದಿದ್ದಲ್ಲಿ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಅಡುಗೆದಾರರಿಗೆ ಎಚ್ಚರಿಕೆ ನೀಡಿದರು.

ವಿದ್ಯಾರ್ಥಿಗಳಿಗೆ ಪಾಠ: ವಸತಿ ನಿಲಯದಲ್ಲಿನ ಎಲ್ಲ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿದ ಉಪ ಲೋಕಾಯುಕ್ತರು, ವಸತಿ ನಿಲಯದಲ್ಲಿ ಶಿಸ್ತಿನಿಂದ ಇರಬೇಕು. ಸರಿಯಾಗಿ ಓದಬೇಕು. ವಸತಿ ನಿಲಯದ ನಿಯಮಗಳ ಪಾಲನೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಶಿಸ್ತಿನ ಪಾಠ ಮಾಡಿದರು.

# ಹಿರೆಕೊಟ್ನೆಕಲ್ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.29–**ತಾಲೂಕಿನ ಹಿರೆಕೊಟ್ನೆಕಲ್ ಹಾಗೂ ಭೋಗವತಿ ಗ್ರಾಮದಲ್ಲಿ ಕೆ.ಪಿ.ಎಸ್.ವಿ.ಎಸ್. ಆಯುರ್ವೆದ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ವತಿಯಿಂದ ಶ್ರೀ ಕಲ್ಮಠದಿಂದ ನಡೆಯುವ 50 ನೇ ವರ್ಷದ ಸುವರ್ಣ ದಸರಾ ಮಹೋತ್ಸವದ ಅಂಗವಾಗಿ ಆಯುರ್ವೇದ ಮೂಲಕ ಉಚಿತ ತಪಾಸಣೆ ಶಿಬಿರ ನಡೆಸಲಾಯಿತು .ಶಿಬಿರದಲ್ಲಿ ಡಾ.ಹಂಪಮ್ಮ , ಡಾ.ಶ್ರೀಕಾಂತ,ಡಾ.ಪ್ರಮೋದ, ಡಾ.ಜುಬೇರ್ , ಡಾ.ವರ್ಷ,ಸೇರಿದಂತೆ ವೈದ್ಯಕೀಯ ವಿದ್ಯಾರ್ಥಿಗಳು ಭಾಗವಹಿಸಿದರು ಶಿಬಿರದಲ್ಲಿ 120 ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ಪಡೆದುಕೊಂಡರು.




# ಚಿಕ್ಕಸೂಗುರ ಬಳಿಯ ಜಲ ಶುದ್ಧೀಕರಣ ಘಟಕಕ್ಕೆ ಉಪ ಲೋಕಾಯುಕ್ತರ ಭೇಟಿ

**ಯುವ ಮಾರ್ಗ ಸುದ್ದಿ**




**ರಾಯಚೂರು,ಆ.29–**ಚಿಕ್ಕಸೂಗುರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಅಧೀನದಲ್ಲಿ ನಿರ್ಮಿಸಲಾದ 10.00 ಎಂಎಲ್ ಡಿ ಸಾಮರ್ಥ್ಯದ ಜಲ ಶುದ್ಧೀಕರಣ ಘಟಕಕ್ಕೆ ಉಪ ಲೋಕಾಯುಕ್ತರಾದ ಬಿ ವೀರಪ್ಪ ಅವರು ಆಗಸ್ಟ್ 29ರಂದು ಬೆಳಗ್ಗೆ ಭೇಟಿ ನೀಡಿದರು.

ಅಲ್ಲಿನ ಪ್ರಯೋಗಾಲಯದಲ್ಲಿನ ಕೆಮಿಕಲ್, ಸಾಮಗ್ರಿ ಮತ್ತು ಇನ್ನಿತರ ಘಟಕಗಳ ವೀಕ್ಷಣೆ ನಡೆಸಿ ನೀರು ಶುದ್ಧೀಕರಣದ ವಿಧಾನಗಳ ಬಗ್ಗೆ ಮಾಹಿತಿ ಪಡೆದುಕೊಂಡರು.ಈ ಘಟಕದಿಂದ ರಾಯಚೂರ ಸಿಟಿಗೆ ಪ್ರತಿ ದಿನ 40 ಎಂಎಲ್ ಡಿ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಅಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿ ತಿಳಿಸಿದರು.

ನೀರು ಶುದ್ಧೀಕರಿಸಲು ಬಳಸುವ ಆಲಂ ಮತ್ತು ಬ್ಲಿಚಿಂಗ್ ಪೌಡರನ್ನು ಉಪ ಲೋಕಾಯುಕ್ತರು ಇದೆ ವೇಳೆ ಪರಿಶೀಲಿಸಿದರು.ಕೃಷ್ಣ ನದಿ ನೀರಿನ ಸದ್ಯದ ಸ್ಥಿತಿ, ನೀರಿನ ಪರೀಕ್ಷೆ ಸೇರಿದಂತೆ ನಾನಾ ಮಾಹಿತಿ ಪಡೆದುಕೊಂಡರು.

**ಶಿಸ್ತಿನ ಪಾಠ:** ಜಲ ಶುದ್ದೀಕರಣ ಘಟಕದಲ್ಲಿ ನಿತ್ಯ ಕೆಲಸ ಮಾಡುವ ಸಿಬ್ಬಂದಿಗೆ ಇದೆ ವೇಳೆ ಉಪ ಲೋಕಾಯುಕ್ತರು ಆರೋಗ್ಯದ ಪಾಠ ಮಾಡಿದರು. ಘಟಕದಲ್ಲಿ ಶುಚಿತ್ವ ಇರಬೇಕು. ಕಾಲಾವಧಿ ನೋಡಿ ವಸ್ತುಗಳ ಬಳಕೆ ಮಾಡಬೇಕು. ವೈಯಕ್ತಿಕ ಆರೋಗ್ಯದ ಬಗ್ಗೆ ಕೂಡ ಗಮನ ಹರಿಸಬೇಕು ಎಂದು ಸಲಹೆ ಮಾಡಿದರು.

ಈ ವೇಳೆ ಹಿರಿಯ ದಿವಾಣಿ ನ್ಯಾಯಾಧೀಶರಾದ ಹೆಚ್ ಎ ಸಾತ್ವಿಕ್, ಬೆಂಗಳೂರಿನ ಉಪ ಲೋಕಾಯುಕ್ತ ಕಚೇರಿಯ ಅಪರ ನಿಬಂಧಕರಾದ ರಮಾಕಾಂತ ಚವ್ಹಾಣ್, ಶಿವಾಜಿ ಅನಂತ ನಲವಾಡೆ, ಉಪ ನಿಬಂಧಕರಾದ ಅರವಿಂದ, ರಾಯಚೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಬಿ.ಚಿಟುಗುಬ್ಬಿ, ಕರ್ನಾಟಕ ಲೋಕಾಯುಕ್ತದ ಡಿಎಸ್ಪಿಗಳಾದ ರವಿ ಪುರಷೋತ್ತಮ, ವಸಂತಕುಮಾರ, ಪೊಲೀಸ್ ನಿರೀಕ್ಷಕರಾದ ಕಾಳಪ್ಪ ಬಡಿಗೇರ, ಚಂದ್ರಪ್ಪ, ಸುನೀಲ್ ಮೇಗಲಮನಿ, ಶೈಲಜಾ, ನಾಗರತ್ನ ಹಾಗೂ ಲೋಕಾಯುಕ್ತ ಕಚೇರಿಯ ಸಿಬ್ಬಂದಿ ಇದ್ದರು.

# ಇಂದು ವಿವಿಧ ಗ್ರಾಮಗಳಿಗೆ ವಿದ್ಯುತ್ ವ್ಯತ್ಯಯ

**ಅರಕೇರಾ,ಆ.29–** ತಾಲೂಕಿನ ಗಲಗ ವಿದ್ಯುತ್ ಉಪಕೇಂದ್ರ ಅಗಸ್ಟ್ 30 ಶನಿವಾರ ರಂದು ಸಮಯ ಬೆಳಿಗ್ಗೆ 10:00 ಗಂಟೆಯಿಂದ ಸಾಯಂಕಾಲ 04:00 ಗಂಟೆಯ ವರೆಗೆ ವಿದ್ಯುತ್ ಸರಭರಾಜನಲ್ಲಿ ವ್ಯತ್ಯಾಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ಉಪ–ವಿಭಾಗ ಗು.ವಿ.ಸ.ಕಂ.ನಿ ದೇವದುರ್ಗ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

110/11 ಕೆ.ವಿ ಗಲಗ್ ಉಪ–ಕೇಂದ್ರ್ರದಲ್ಲಿ 11 ಕೆ.ವಿ ಫೀಡರ್‌ಗಳ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ. ಎಲ್ಲಾ ವಿದ್ಯುತ್ ಬಳಕೆ ಗ್ರಾಹಕರು ಸಹಕರಿಸಲು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಾಯವಾಗುವ ಪ್ರದೇಶಗಳು ಗಲಗ್, ಪಲಕನಮರಡಿ, ಬಿ.ಗಣೇಕಲ್, ವಂದಲಿ,ಊಟ, ಸಮುದ್ರ, ಪಂದ್ಯಾನ, ಗಂಗಾನಾಯ್ಕ ತಾಂಡ, ಚಡಕಲಗುಡ್ಡ, ಕಜ್ಜಿಬಂಡಿ ಮತ್ತು ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳು ವಿದ್ಯುತ್ ವ್ಯತ್ಯಾಯವಾಗಲಿದೆ.

# ಸದ್ಭಾವನೆಗಳ ಕೃಷಿಕರಾಗಿ: ಹಾರಕೂಡ ಶ್ರೀ



**ಬೀದರ್,ಅ.29–** ಪ್ರತಿಯೊಬ್ಬರು ಸದ್ಭಾವನೆಗಳ ಕೃಷಿಕರಾದಾಗ ಸಮಾಜ ಧರ್ಮದ ಉಗ್ರಾಣವಾಗಿ ಮಾರ್ಪಡುತ್ತದೆ ಎಂದು ಹಾರಕೂಡದ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ಬಸವಕಲ್ಯಾಣ ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಗದಲೇಗಾಂವ ಬಿ. ಗ್ರಾಮದ ಭಕ್ತಾದಿಗಳಿಂದ ಆಯೋಜಿಸಿದ 868ನೇ ತುಲಾಭಾರ ಹಾಗೂ ಶ್ರಾವಣ ಮಾಸದ ನಿತ್ಯ ಪಾದಯಾತ್ರೆ ಮಹಾಮಂಗಲ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಮನುಷ್ಯ ಭಾವನಾ ಜೀವಿಯಾಗಿದ್ದು, ಆತನಲ್ಲಿ ಹುಟ್ಟುವ ಭಾವನೆಗಳು ಭಗವದೀಯವಾಗಿದ್ದಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ಜೀವನ ಸುಂದರ ಹಾಗೂ ಶ್ರೇಯಸ್ಸಿನಿಂದ ಕೂಡಿರುತ್ತದೆ.

ಬೇರೆಯವರ ಉನ್ನತಿ ಕಂಡು ಅಸೂಯೆ ಪಡದೆ, ಅವರಿಂದ ಪ್ರೇರಣೆ ಪಡೆದಾಗ ತೂಕದ ಬದುಕು ಸಾಗಿಸಲು ಸಾಧ್ಯವಾಗುತ್ತದೆ.

ಪಾದಯಾತ್ರೆ ಭಿನ್ನತೆ ತೊಲಗಿಸಿ ಭಾವೈಕ್ಯದ ಸದ್ಭಾವನೆ ಅರಳಿಸುತ್ತದೆ.

ಎಲ್ಲರೂ ಕೂಡಿ ನಡೆಯುವಾಗ, ಉಂಟಾಗುವ ಸಾಮರಸ್ಯದ ಭಾವ ಬಾಳಿಗೊಂದು ಸಹಜತೆಯ, ಸರಳತೆಯ ಪಾಠ ಬೋಧಿಸುತ್ತದೆ.

ಹಾರಕೂಡ ಗುರುಪೀಠದ ಮೇಲೆ ಇಟ್ಟಿರುವ ನಿಷ್ಠೆ ಭಕ್ತಿಯಿಂದ ಗದಲೇಗಾಂವ ಬಿ. ಗ್ರಾಮದ ಹಾಗೂ ಎಲ್ಲಾ ಭಕ್ತರ ಜೀವನ ಶುಭದಿಂದ ಕೂಡಿರಲಿ ಎಂದು ಹಾರೈಸಿದರು.

ಮಲ್ಲಿನಾಥ ಹಿರೇಮಠ ಹಾರಕೂಡ, ಮಹಾಂತಪ್ಪ ಶ್ರೀಚಂದ, ನಾಗಣ್ಣ ಪಾಟೀಲ, ಗೋಪಾಲರಾವ ರಾಯಜಿ, ರಾಘವೇಂದ್ರರೆಡ್ಡಿ ಚುಮ್ಮನಚೂಡ, ವಿಜಯಕುಮಾರ ಬೈಟ ಪಾಟೀಲ, ತುಕಾರಾಮ ರೆಡ್ಡಿ ಬಾಕಾರೆ, ಸೋಮನಾಥ ಪೊಲೀಸ್ ಪಾಟೀಲ, ಶಿವಲಿಂಗಪ್ಪ ಪೊಲೀಸ್ ಪಾಟೀಲ, ಗೋವಿಂದ ರೆಡ್ಡಿ ಸೇಳಗೆ, ಕಲ್ಯಾಣರಾವ ಬೆಳಮಗೆ ಮುಂತಾದವರು ಉಪಸ್ಥಿತರಿದ್ದರು.

ಕಾರ್ತಿಕ ಸ್ವಾಮಿ ಯಲ್ಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು.

ಮಾನಸಿ ಸೂರ್ಯವಂಷಿ ಸಾಂಸ್ಕೃತಿಕ ನೃತ್ಯ ರೂಪಕ ಪ್ರಸ್ತುತಪಡಿಸಿದ್ದರು.

ಆನಂದಿ ಹರಿದಾಸ ಮತ್ತು ಮಾನಸಿ ಗದಲೇಗಾಂವ ಭರತನಾಟ್ಯ ಮಾಡಿದರು.

ಸಂತೋಷಿ ಹಡಪದ ಭಕ್ತಿ ಗೀತೆ ಹಾಡಿದರು.

ವಿಠಲ ಹೂಗಾರ ಸ್ವಾಗತಿಸಿ, ನಿರೂಪಣೆ ಮಾಡಿದರು.

ಮಹದೇವ ಪಾಟೀಲ ವಂದನಾರ್ಪಣೆ ಮಾಡಿದರು.

ಚಿತ್ರ : ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಗದಲೇಗಾಂವ ಬಿ. ಗ್ರಾಮದ ಭಕ್ತಾದಿಗಳಿಂದ ಆಯೋಜಿಸಿದ 868ನೇ ತುಲಾಭಾರ ಹಾಗೂ ಶ್ರಾವಣ ಮಾಸದ ನಿತ್ಯ ಪಾದಯಾತ್ರೆ ಮಹಾಮಂಗಲ ಕಾರ್ಯಕ್ರಮವನ್ನು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು.

ಮಲ್ಲಿನಾಥ ಹಿರೇಮಠ ಹಾರಕೂಡ, ಮಹಾಂತಪ್ಪ ಶ್ರೀಚಂದ, ನಾಗಣ್ಣ ಪಾಟೀಲ, ಗೋಪಾಲರಾವ ರಾಯಜಿ, ವಿಜಯಕುಮಾರ ಬೈಟ ಪಾಟೀಲ, ಸೋಮನಾಥ ಪೊಲೀಸ್ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H